# ಅಧ್ಯಯನ – 14 Study XIV

# ಪಾಪ ಪರಿಹಾರದ ಅವಶ್ಯಕತೆ – ಶಾಪವು

## THE NECESSITY FOR THE ATONEMENT - THE CURSE

**ಶಾಪವೆಂಬುದು ಪ್ರಸ್ತುತವಾದದು ಮತ್ತು ಮುಂದೆ ಸಂಭವಿಸಲಿರುವ ಕೇಡಲ್ಲ – ಕೇಡು ಎಲ್ಲರ ಮೇಲೆ ಹೇಗೆ ಮತ್ತು ಯಾಕೆ ಬಂತು? – ಪಾಪದ ಮೇಲಿನ ದೇವರ ಈ ಕ್ರೋಧವು ಯಾವಾಗ ಮುಕ್ತಾಯಗೊಳ್ಳುತ್ತದೆ? – "ತಪ್ಪಿಸಿಕೊಳ್ಳುವಿಕೆ" ಈಗ ಮತ್ತು ಮುಂದೆ – ದೇವರು ಆಯ್ದುಕೊಂಡಿರುವ ಯೋಜನೆಯ ಕಾರಣ ಪಾಪನಿವೃತ್ತಿಯು ಅವಶ್ಯ – ಮಾನವನು ದೇವದೂತರುಗಳಿಗೆ ಮತ್ತು ಮುಂಬರುವ ಸೃಷ್ಟಿಗಳಿಗೆ ಒಂದು ಉದಾಹರಣೆಯಾಗಿದ್ದಾನೆ.**

**"ಇನ್ನು ಶಾಪಗ್ರಸ್ಥವಾದದ್ದು ಒಂದೂ ಇರುವುದಿಲ್ಲ" – (ಪ್ರಕಟನೆ 22:3)**

ನಮ್ಮ ಮೂಲ ಪಾಠವು ಪಾಪನಿವೃತ್ತಿ ಸಂಪೂರ್ಣವಾಗಿ ನೆರವೇರಿ ಅದರ ಫಲವಾಗಿ ಶಾಪವು ಮಾನವರಿಂದ, ಈ ಲೋಕದಿಂದ ಮತ್ತು ಆತನ ಸಾಮ್ರಾಜ್ಯದಿಂದಲೇ ಪೂರ್ಣವಾಗಿ ಎತ್ತಲ್ಪಡುವ ಕಾಲ ಬರುತ್ತದೆ ಎಂಬ ದೇವರ ಪರಿಶುದ್ಧ ಗ್ರಂಥಗಳ ಸ್ವಭಾವಕ್ಕೆ ಪೂರ್ಣ ಅನುಸಾರವಾಗಿದೆ. ಆದರೆ ಈ ಶಾಪವು ಇನ್ನೂ ಎತ್ತಲ್ಪಟ್ಟಿರುವುದಿಲ್ಲ ಅದು ಇನ್ನೂ ಲೋಕದ ಮತ್ತು ಮಾನವ ಜಾತಿಯ ಮೇಲೆ ಇದ್ದೇ ಇದೆ ಎಂಬ ಅರ್ಥವನ್ನೂ ಸೂಚಿಸುತ್ತದೆ. ಇದಕ್ಕೂ ಹೆಚ್ಚಾಗಿ, ಒಂದು ಕಾಲದಲ್ಲಿ ಈ ಶಾಪವು ಎಲ್ಲರ ಮೇಲೆ ಬಂತು ಮತ್ತು ಅದು ಯಾವ ರೀತಿಯಲ್ಲಿ ಮಾನವ ಮತ್ತು ಲೋಕದ ಮೇಲೆ ಎರಗಿ ಬಂತು ಎಂಬುದನ್ನೂ ತಿಳಿಸುತ್ತದೆ. ಈ ವಿಷಯದ ಬಗ್ಗೆ ತನಿಖೆ ನಡೆಸುವ ಕಷ್ಟವನ್ನು ಯಾವನು ತೆಗೆದುಕೊಳ್ಳುತ್ತಾನೋ ಆತನು ದೇವರ ವಾಕ್ಯಗಳಲ್ಲಿ ಮೂರು ಸಂಗತಿಗಳನ್ನು ಅದ್ಭುತವಾಗಿ ಕಂಡುಕೊಳ್ಳುತ್ತಾನೆ ಮತ್ತು ಇವು ಬಹುಶಃ ಆತನನ್ನು ಚಕಿತಗೊಳಿಸುತ್ತವೆ ಮತ್ತು ದೇವರ ವಾಕ್ಯವು ಮಾನವ ಮೂಲದ್ದಲ್ಲ, ಅದು ವಿವಿಧ ಗ್ರಂಥಕರ್ತರುಗಳಿಂದ, ವಿವಿಧ ಕಾಲಗಳಲ್ಲಿ ಎರಡು ಸಾವಿರ ವರ್ಷಗಳ ಸಮಯಗಳಲ್ಲಿ ರಚಿಸಲ್ಪಟ್ಟಿದ್ದರೂ ಅವರೆಲ್ಲರೂ ತಮ್ಮ ಸಾಕ್ಷ್ಯದಲ್ಲಿ ಒಂದೇ ಘಟಕವಾಗಿದ್ದಾರೆ ಎಂಬುದನ್ನು ಆತನಿಗೆ ಮನದಟ್ಟು ಪಡಿಸುತ್ತದೆ. ಆದರೆ, ಶಾಪವೆಂಬ ಈ ಪ್ರಸ್ತಾಪದಲ್ಲಿ, ಮಾನವನ ಮೇಲೆ ಅದರ ಪರಿಣಾಮ, ಅದರಿಂದ ವಿಮೋಚನೆ ಮತ್ತು ಅಂತಿಮವಾಗಿ ಅದನ್ನು ತೆಗೆದುಹಾಕುವುದು ಈ ಬಗ್ಗೆ ಇರುವ ಖಚಿತತೆ, ಸ್ಥಿರತೆ ಮತ್ತು ನಿರ್ಧಾರಾತ್ಮಕತೆಯು ಅದರ ಸಾಕ್ಷ್ಯದಲ್ಲಿನ ಬೇರೆ ಯಾವ ಪ್ರಸ್ತಾಪದಲ್ಲಿಯೂ ಇಷ್ಟರ ಮಟ್ಟಿಗೆ ಕಂಡುಬರುವುದಿಲ್ಲ.

ಸಾಮಾನ್ಯವಾಗಿ ಎಲ್ಲರೂ ಅರ್ಥಮಾಡಿಕೊಂಡಿರುವಂತೆ ಮತ್ತು ಬೋಧಿಸುವಂತೆ ಮಾನವ ಜಾತಿಯ ಮೇಲೆ ಬಂದ ಈ ಶಾಪವು ಮುಂಬರುವ ನಿತ್ಯಯಾತನೆಯುಳ್ಳ ಶಾಪವಾಗಿದೆಯೇ ಹೊರತು ಪ್ರಸ್ತುತವಾದ ಶಾಪವಲ್ಲ ಎಂದುಕೊಂಡಿದ್ದಾರೆ. ಆದರೆ, ದೇವರ ವಾಕ್ಯದ ಪ್ರಕಾರವಾಗಿ ಇದು ಪ್ರಸ್ತುತದಲ್ಲಿರುವ ಶಾಪವಾಗಿದೆ ಅಂದರೆ ಮರಣ. ಇದು ಮುಂದೆ ತೆಗೆದುಹಾಕಲ್ಪಡುವುದು. ನಾವು ಈ ಮರಣವೆಂಬ ಶಾಪವನ್ನು ಸಾಮಾನ್ಯವಾದ ಮಿತಿಯುಳ್ಳ ರೀತಿಯಲ್ಲಿ ಅಂದರೆ ನಾವು ಉಸಿರು (ಪ್ರಾಣ) ಬಿಡುವ ಸಮಯದಲ್ಲಿ ಆ ಮರಣವು ಕೆಲವು ಕ್ಷಣದ ಅಥವಾ ಕೆಲವು ಘಂಟೆಗಳ ಪರಿಣಾಮ ಎಂಬುದಾಗಿ ಯೋಚಿಸುವುದಿಲ್ಲ. ಇದಕ್ಕೆ ವಿರೋಧವಾಗಿ, ಈ ಮರಣ ಅಥವಾ ಶಾಪವನ್ನು ಗ್ರಹಿಸಿಕೊಳ್ಳಲು ನಮಗೆ ಮೊಟ್ಟಮೊದಲ ಸರ್ವ ಸಂಪೂರ್ಣನಾಗಿದ್ದ ಮನುಷ್ಯನ ಚಿತ್ರಣ ಆತನ ಮನಸ್ಸಿನ ಶಕ್ತಿ ಮತ್ತು ದೇಹದೊಂದಿಗೆ – ಸೃಷ್ಟಿಕರ್ತನ ರೂಪ ಆತನ ಮಾನಸಿಕ ಗುಣಗಳೊಂದಿಗೆ, ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿ ಮತ್ತು ನೈತಿಕವಾಗಿ ಮತ್ತು ಈ ಪ್ರಸ್ತಾಪದ ಅತ್ಯುನ್ನತ ಅಧಿಕಾರವುಳ್ಳಾತನು ಹೇಳಿದಂತೆ "ಬಹಳ ಒಳ್ಳೆಯದಾಗಿತ್ತು" ಎಂಬ ಮಾತುಗಳೊಡನೆ ನಮ್ಮ ಮನಸ್ಸಿನ ಕಣ್ಣುಗಳ ಮುಂದೆ ಮೂಡಿಬರಬೇಕಾಗುತ್ತದೆ – **"ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೆಯದಾಗಿತ್ತು"** (ಆದಿ. 1:31).

ಆದಿಕಾಂಡದಲ್ಲಿ ನಮಗೆ ಕೊಡಲ್ಪಟ್ಟಿರುವ ಚರಿತ್ರೆಯ ಸಂಕ್ಷಿಪ್ತವಾದ ತುಣುಕು ಮತ್ತು ಅದರೊಂದಿಗೆ ಮಹಾಪ್ರವಾಹದಲ್ಲಿ ತೊಡೆದುಹಾಕಲ್ಪಟ್ಟವುಗಳ ಕಾರಣ ನಮ್ಮ ಜನಾಂಗದ ಪಿತೃವು ತನ್ನ ಅಸಾಧಾರಣವಾದ ಬುದ್ಧಿಶಕ್ತಿಯಿಂದ ಸೃಷ್ಟಿಸಿದ ಅದ್ಭುತವಾದ ಆತನ ಕೈಕೆಲಸಗಳು ಮತ್ತು ಆತನ ಬಹಳ ಹಿಂದಿನ ಸಂತಾನ ಇವುಗಳ ಬಗ್ಗೆ ಆತನ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯವನ್ನು ಅಳೆಯುವ ಯಾವುದೇ ತಳಹದಿಯನ್ನು ನಮಗೆ ಉಳಿಸಿರುವುದಿಲ್ಲ. ಉದಾಹರಣೆಗಾಗಿ **"ದೇವರು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ"** ದೇವರ

(ಧರ್ಮೋ. 32:4) ಮತ್ತು ಆತನು ಮುಂದೆ ಪ್ರಕಟಿಸಿರುವಂತೆ "**ದೇವರು ಮನುಷ್ಯರನ್ನು ಸತ್ಯವಂತರನ್ನಾಗಿ ಸೃಷ್ಟಿಸಿದನು. ಅವರಾದರೋ ಬಹು ಯುಕ್ತಿಗಳನ್ನು ಕಲ್ಪಿಸಿಕೊಂಡಿದ್ದಾರೆ"** (ಪ್ರಸಂಗಿ 7:29). ದೇವರು ಮಾನವನನ್ನು ಏದೇನ್ ತೋಟದಿಂದ ಅಟ್ಟಿದ ಮೇಲೆ ದೇವರ ಶಾಪದ ಅಡಿಯಲ್ಲಿಯೂ, ಅನುಕೂಲವಲ್ಲದ ಪರಿಸ್ಥಿತಿಗಳಲ್ಲಿಯೂ, ಈ ಮಾನವ ಶರೀರವು ಭವ್ಯವಾದ ರೀತಿಯಲ್ಲಿ ಸರ್ವಸಂಪೂರ್ಣ ವಾಗಿಯೇ ಇದ್ದು ಮಾನವ ಜನಾಂಗದ ತಂದೆ ಎನಿಸಿಕೊಂಡಾತನು ಒಂಬೈನೂರ ಮೂವತ್ತು ವರ್ಷಗಳ ಕಾಲ ಜೀವಿಸಿದನು – ಆದಿ. 5:5.

ನಾವು ಈ ಪ್ರಾಕೃತಿಕ ಜೀವನ ಶಕ್ತಿಯನ್ನು ಔಷಧಿಗಳ ಮತ್ತು ಆರೋಗ್ಯ ರಕ್ಷಣಾ ಸಂಬಂಧವಾದ ಅಭಿವೃದ್ಧಿಯ ಮೂಲಕ ಉಂಟಾಗಿರುವ ವಿಸ್ತಾರವಾದ ಅನುಭವದ ಸಹಾಯವಿಲ್ಲದೆ ಪ್ರಸ್ತುತ ಪರಿಸ್ಥಿತಿಯೊಂದಿಗೆ ಹೋಲಿಸುವಾಗ, ಈ ಎಲ್ಲಾ ವೈಜ್ಞಾನಿಕ ಮುಂದುವರಿಕೆಯ ಹೊರತಾಗಿಯೂ, ಶತಮಾನಗಳ ಅನುಭವಗಳ ಬೆಳಕಿನಲ್ಲಿ ಇಂದು ಜನಸಂಖ್ಯೆಯ ಒಂದು ಅರ್ಧಭಾಗವಾದರೂ ಹತ್ತುವರ್ಷದ ಒಳಗೇ ಮರಣಿಸುವರೆಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. ಒಟ್ಟಾರೆಯಾಗಿ ಜನರ ಸರಾಸರಿ ಜೀವನಕಾಲವು ಇಂದು ಕೇವಲ ಮೂವತ್ತು ಮೂರು ವರ್ಷಗಳು ಮಾತ್ರ. ಇದರಿಂದ ನಾವು ಎಷ್ಟರ ಮಟ್ಟಿಗೆ ನಮ್ಮ ದೈಹಿಕ ಸಾಮರ್ಥ್ಯವನ್ನು ಪತನದ ನಂತರದಲ್ಲಿ ಕಳಕೊಂಡಿದ್ದೇವೆ ಮತ್ತು ದೇವರ ಶಾಪವು ದೈಹಿಕವಾಗಿ ನಮ್ಮ ಮೇಲೆ ಎಷ್ಟರಮಟ್ಟಿಗೆ ಪರಿಣಾಮವನ್ನುಂಟುಮಾಡಿದೆ ಎಂಬುದನ್ನು ನಾವೇ ನಿರ್ಣಯಿಸಬಹುದಾಗಿದೆ. ಮಾನಸಿಕ ಮತ್ತು ದೈಹಿಕ ಶಕ್ತಿಗಳು ಮಾನವನಲ್ಲಿ ಹೆಚ್ಚಾಗಿ ಸಂಘಟಿಸಲ್ಪಟ್ಟಿವೆ. ಹೀಗಾಗಿ ನಮ್ಮ ಶಾರೀರಿಕ ರಚನೆಯು ಎಷ್ಟರ ಮಟ್ಟಿಗೆ ಸ್ವಾಸ್ಥವಾಗಿರುತ್ತದೆಯೋ, ಎಲ್ಲಾ ಸಂಗತಿಗಳೂ ಸಮವಾಗಿರುತ್ತವೋ ಮಾನಸಿಕ ಶಕ್ತಿಯೂ, ಸಹನ ಶಕ್ತಿಯೂ ಸಹಾ ಅಷ್ಟೇ ಬಲವುಳ್ಳದ್ದೂ, ವಾಸ್ತವವಾದುದೂ ಆಗಿರುತ್ತವೆ. ಇದರಿಂದ ನಾವು ಮಹಾ ಸೃಷ್ಟಿಕರ್ತನು 'ಬಹಳ ಒಳ್ಳೆಯದಾಗಿದೆ' ಎಂದು ಘೋಷಿಸಿದ ಮತ್ತು ಆತನ ಮಗನೂ ಆತನ ಮಾನಸಿಕ ಮತ್ತು ನೈತಿಕ ಹೋಲಿಕೆಗೆ ಸರಿಯಾಗಿ ರೂಪಿಸಲ್ಪಟ್ಟವನೂ ಆದ ನಮ್ಮ ಆದಿ ತಂದೆಯೂ ಆದ ಆದಾಮನ ಮಾನಸಿಕ ಮತ್ತು ನೈತಿಕ ಬಲ ಶಕ್ತಿಯ ಒಂದು ಗೌರವಯುತವಾದ ನೋಟವನ್ನು ನೋಡಬಹುದಾಗಿದೆ – ಲೂಕ 3:38..

ಸೃಷ್ಟಿಕಾರ್ಯದ ದೈವಿಕ ವಿವರಣೆಯಲ್ಲಿ ಪ್ರಸ್ತುತಿಪಡಿಸಿರುವ ಮಾನಸಿಕ ಮತ್ತು ದೈಹಿಕ ಸಂಪೂರ್ಣತೆಯು ಸ್ಪಷ್ಟವಾಗಿಯೂ, ಸಕಾರಾತ್ಮಕ ವಾಗಿಯೂ ನೈತಿಕ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಯಾಕೆಂದರೆ, ದೇವರ ವಾಕ್ಯದ ಪ್ರಕಾರವಾಗಿ ನೀತಿ ಭ್ರಷ್ಟತೆಯು ಮತ್ತು ಅದರ ಪರಿಣಾಮವಾದ ಅವನತಿಯು ಇನ್ನೂ ಪ್ರಾರಂಭವಾಗಿರಲಿಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಮಾನವನು ತನ್ನ ಮಾನಸಿಕ ಅಭಿವೃದ್ಧಿಗೆ ಯಾವುದೇ ನೈತಿಕ ಅಂಶಗಳಿಲ್ಲದೆ ದೇವರ ವಾಕ್ಯದ ಪ್ರಕಾರ **"ಬಹಳ ಒಳ್ಳೆಯದು"** ಎಂಬುದಾಗಿಯೂ ಮತ್ತು ದೈವ ಸ್ವರೂಪದಲ್ಲಿಯೂ ಸೃಷ್ಟಿಸಲ್ಪಡಲಿಲ್ಲ. ಮಾನವನನ್ನು ನೈತಿಕವಾಗಿ ಸೃಷ್ಟಿಸಲ್ಪಡದೆ ಕೇವಲ ದೈಹಿಕವಾಗಿಯೂ ಹಾಗೂ ಮಾನಸಿಕವಾಗಿಯೂ ಸಮರ್ಪಕವಾಗಿ ಸೃಷ್ಟಿಸಿದ್ದರೆ ಅದು ಆತನನ್ನು ಒಬ್ಬ ಬಹಳ ಕೆಟ್ಟ ವ್ಯಕ್ತಿಯನ್ನಾಗಿ ಸೃಷ್ಟಿಸಿದಂತಾಗುತ್ತಿತ್ತು. ಸರ್ವಸಾಮಾನ್ಯವಾಗಿ ಮಾನವನಿಗೆ ಹೆಚ್ಚು ಸಾಮರ್ಥ್ಯವಿದ್ದಲ್ಲಿ ಆ ಸಾಮರ್ಥ್ಯವು ನಿಯಂತ್ರಣ ದಲ್ಲಿಲ್ಲವಾದಲ್ಲಿ ಆತನು ಅಷ್ಟೇ ದುಷ್ಟನಾಗಬಹುದಾಗಿದೆ.

**"ನೀನು ಸತ್ತೇ ಹೋಗುವಿ"** (ಆದಿ. 2:7) ಎಂದು ದೇವರು ಆದಾಮನಿಗೆ ನೀಡಿದ ಮರಣ ದಂಡನೆ ಅಥವಾ ಶಾಪವು ಕೇವಲ ಆತನ ಮಾಂಸಖಂಡಗಳಿಗೆ ಅಥವಾ ಶಾರೀರಿಕ ಚೌಕಟ್ಟುಗಳಿಗೆ ಅಲ್ಲ. – ಅದು ಇಡೀ ಮಾನವನನ್ನು ಅಂದರೆ ಆತನ ಮಾನಸಿಕ ಹಾಗೂ ದೈಹಿಕ ಸಂಗತಿಗಳನ್ನು ಒಳಗೊಂಡಿದೆ – ಇದರಲ್ಲಿ ನೈತಿಕ ಅಂಶಗಳೂ ಅವೆ. ಯಾಕೆಂದರೆ ಅವು ಮಾನಸಿಕತೆಯ ಭಾಗವಾಗಿವೆ. ಇದರ ಸಂಪೂರ್ಣವಾದ ದೃಢತೆಯಲ್ಲಿ ಇಂದು ಮಾನವನು ಎಲ್ಲಾ ಅರ್ಥದಲ್ಲಿಯೂ ಒಬ್ಬ ಪತನಗೊಂಡ ವ್ಯಕ್ತಿಯಾಗಿದ್ದಾನೆ ಎಂಬುದನ್ನು ನಾವು ಕಾಣುತ್ತೇವೆ ; ದೈಹಿಕವಾಗಿ ಆತನು ಅವನತಿ ಹೊಂದಿದ್ದಾನೆ, ಒಳ್ಳೆಯ ಅನುಕೂಲಕರ ಸ್ಥಿತಿಯಲ್ಲಿ ಆತನ ಸರಾಸರಿ ಆಯುಸ್ಸು 33 ವರ್ಷಗಳಿಗೆ ಕುಗ್ಗಿದೆ; ಮಾನಸಿಕವಾಗಿ ಮತ್ತು ನೈತಿಕವಾಗಿ ಆತನು ಕುಂದಿಹೋಗಿದ್ದಾನೆ. ಹೀಗಿದ್ದರೂ ಆತನ ಆಯುಸ್ಸು ಅನುಮತಿಸಿರುವುದಕ್ಕಿಂತಲೂ ಬಲವಾದ ಶರೀರ ರಚನೆಯನ್ನು ಆತನು ಹೊಂದಿದ್ದಾನೆ ಮತ್ತು ಅದನ್ನು ಅಭಿವೃದ್ಧಿಪಡಿಸಿಕೊಳ್ಳಬಲ್ಲನು. ಮಾನವನ ನೈತಿಕ ಸಾಮರ್ಥ್ಯಗಳ ಬಗ್ಗೆ ಮಾತನಾಡುತ್ತಾ ಅಪೋಸ್ತಲನು ಹೇಳುವುದೇನೆಂದರೆ **"ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ"** (ರೋಮಾ. 3:10). **"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ"** – ರೋಮಾ. 3:23.

ಮುಂದುವರೆದು ಅಪೋಸ್ತಲನು ನಮ್ಮ ಗಮನಕ್ಕೆ ತರುವುದೇನೆಂದರೆ, ದೇವರ ಸನ್ನಿಧಾನದಲ್ಲಿ ವಿಚಾರಣೆಗೊಳಪಟ್ಟಾಗ ತಂದೆಯಾದ ಆದಾಮನು **"ವಂಚನೆಗೆ ಒಳಬೀಳಲಿಲ್ಲ"** (1 ತಿಮೋ. 2:14), ಇಚ್ಛಾಪೂರ್ವಕವಾದ ಅಪರಾಧಿ. ಈ ರೀತಿಯಲ್ಲಿ

ಆತನು ತನ್ನ ನೈತಿಕ ಗುಣಲಕ್ಷಣದಲ್ಲಿ ದೇವರ ಅಗತ್ಯತೆಗಳಿಗೆ ವಿಧೇಯನಾಗಲು ಸಮರ್ಥನಿದ್ದನು. ಒಬ್ಬ ಅಸಮರ್ಥ ಅಥವಾ ಕುಂದುಕೊರತೆಯುಳ್ಳವನನ್ನು ಈ ಲೋಪದ ಕಾರಣದಿಂದ ಎಸಗಿದ ಅಪರಾಧಕ್ಕೆ ದೇವರು ಆತನನ್ನು ವಿಚಾರಣೆಗೊಳಪಡಿಸಿ ಶಿಕ್ಷಿಸುತ್ತಿದ್ದರೆ ಅದು ಅನ್ಯಾಯವಾಗುತ್ತಿತ್ತು. ಆತನು ಈ ಪರೀಕ್ಷೆಯನ್ನು ಜಯಪ್ರದವಾಗಿ ಎದುರಿಸಲಾಗುತ್ತಿರಲಿಲ್ಲ. ಆದಾಮನಿಗೆ ಮರಣ ಅಥವಾ ನಿತ್ಯಜೀವದ ಒಂದು ಶೋಧನೆ ಯುಂಟಾಯಿತು ಮತ್ತು ಆತನು ಅದಕ್ಕೆ ಸೋತುಹೋದದ್ದು ಇಚ್ಛಾಪೂರ್ವಕವಾಗಿ ಮತ್ತು ಆದ ಕಾರಣ ಮಹಾ ನ್ಯಾಯಾಧಿಪತಿಯಿಂದ ಆತನಿಗೆ ನ್ಯಾಯಯುತವಾದ ಶಿಕ್ಷೆಯುಂಟಾಯಿತು ಎಂಬ ಸತ್ಯವು ಎಲ್ಲಾ ಪಕ್ಷಪಾತವಿಲ್ಲದ ತಾರ್ಕಿಕ ಮನುಷ್ಯರಿಗೆ ಆದಾಮನು ಎಲ್ಲಾ ರೀತಿಯಲ್ಲಿಯೂ ಸಮರ್ಪಕವಾಗಿದ್ದನು ಮತ್ತು ತನಗೆ ಬಂದ ಶೋಧನೆಯನ್ನು ಪರಿಣಾಮಕಾತ್ಮಕವಾಗಿ ಎದುರಿಸಲು ಶಕ್ತನಾಗಿದ್ದನು ಎಂಬುದನ್ನು ರುಜುವಾತುಪಡಿಸುತ್ತದೆ.

ದೇವರು ಈಡುಬಲಿಯ ಕ್ರಯವನ್ನು ತೆತ್ತಮೇಲೆಯೂ ಅದೇ ದೋಷಾರೋಪಣೆ ಮಾಡಲಾಗದ ತನ್ನ ಪರಮೋಚ್ಚ ನ್ಯಾಯಾಲಯದ ಮುಂದೆ ಪುನಃ ಮಾನವನನ್ನು ವಿಚಾರಣೆಗೆ ಒಳಪಡಿಸುವುದನ್ನು ನಿರಾಕರಿಸುತ್ತಾನೆ ಮತ್ತು ಇದಕ್ಕೆ ಕಾರಣವಾಗಿ ನಾವು ಪತನಗೊಂಡ ಪರಿಸ್ಥಿತಿಯಲ್ಲಿ ಆತನ ಪ್ರತಿಬಂಧಧ ಪರಿಪೂರ್ಣ ನ್ಯಾಯಾಲಯದ ಮುಂದೆ ಹಾಜರಾಗಲು ಅಶಕ್ತರಾಗಿದ್ದೇವೆ ಮತ್ತು ತಮ್ಮ ಉತ್ತಮ ಕ್ರಿಯೆಗಳಿಂದ ಯಾರೊಬ್ಬರೂ ಆತನ ಮುಂದೆ ನೀತಿವಂತರೆಂದು ನಿರ್ಣಯ ಹೊಂದಲಾರರು ಎಂಬ ಸತ್ಯ – ಇವೆಲ್ಲವೂ ನಿರ್ಣಾಯಕವಾಗಿ, ಜನಾಂಗವು ತೀವ್ರರೀತಿಯಲ್ಲಿ ಪತನಗೊಂಡಿರುವುದು ಮಾತ್ರವಲ್ಲ, ಆದಾಮನು ನಮಗಿಂತ ಉತ್ತಮನಾಗಿ, ವಿಚಾರಣೆಗೆ ಸಂಪೂರ್ಣ ಯೋಗ್ಯನಾದ ಸಮರ್ಪಕ ವ್ಯಕ್ತಿಯಾಗಿ ಕಂಡುಬಂದಿರದಿದ್ದರೆ ದೇವರು ಆತನನ್ನು ವಿಚಾರಣೆಗೆ ಒಳಪಡಿಸುತ್ತಲೇ ಇರಲಿಲ್ಲ ಎಂಬುದನ್ನು ಸಾಬೀತು ಪಡಿಸುತ್ತದೆ. ಈ ಆಲೋಚನೆಗೆ ಪೂರ್ಣ ಒಪ್ಪಿಗೆಯಿಂದ ದೇವರು ಈ ಸುವಾರ್ತಾ ಯುಗದಲ್ಲಿ ನಿತ್ಯನಿರಂತರ ಸ್ಥಿತಿಯ ಬಹುಮಾನಕ್ಕಾಗಿ ಸಭೆಯ ನ್ಯಾಯ ವಿಚಾರಣೆಯನ್ನು ಮತ್ತು ಮಿಲಿಯಾಂತರ ಯುಗದಲ್ಲಿ ನಿತ್ಯ ನಿರಂತರವಾದ ಮಾನವ ಸರ್ವಸಂಪೂರ್ಣತೆಗಾಗಿ ಈ ಲೋಕದ ನ್ಯಾಯತೀರ್ವಿಕೆಯನ್ನು ಪ್ರಸ್ತಾಪಿಸುತ್ತಾನೆ. – **"ತಂದೆಯು ಯಾರಿಗೂ ತೀರ್ಪು ಮಾಡುವುದೂ ಇಲ್ಲ; ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ"** – ಯೋಹಾನ 5:22.

ಸತ್ಯವೇದವು ಸಮಗ್ರವಾಗಿ ಮಾನವನನ್ನು ಪರಿವೀಕ್ಷಣೆ ಮಾಡುವಾಗ (ಮಾನಸಿಕವಾಗಿ, ನೈತಿಕವಾಗಿ ಮತ್ತು ದೈಹಿಕವಾಗಿ) ಶಾಪವು ಅಂದರೆ ಮರಣ ದಂಡನೆಯು ಆತನ ಎಲ್ಲಾ ಭಾಗಗಳ ಮತ್ತು ಅಂಶಗಳ ವಿರುದ್ಧವಾಗಿ ಕಾರ್ಯವೆಸಗುತ್ತಿದೆ ಎಂಬುದನ್ನು ನಾವು ನೋಡುತ್ತೇವೆ. ನಮ್ಮನ್ನು ಪ್ರಪಂಚದಾದ್ಯಂತ ನೋಡುವಾಗ ನಾವು ಎಲ್ಲರಲ್ಲಿಯೂ ಇದರ ಸಮರ್ಥನೆಯನ್ನು ಕಾಣುತ್ತೇವೆ. ಶಾರೀರಿಕ ಶಕ್ತಿಯು ಕ್ಷಯಿಸುವಾಗ, ಕೆಲವರಲ್ಲಿ ಅತ್ಯಂತ ಬಲಹೀನ ಭಾಗವು ಇತರ ಮಾಂಸಖಂಡಗಳು ಮತ್ತು ಮೂಳೆಗಳೊಂದಿಗೆ ಹೊಟ್ಟೆಯೂ ಆಗಿದೆ. ಹೀಗಾಗಿ, ಮಾನವನನ್ನು ಒಟ್ಟಾರೆಯಾಗಿ ದೃಷ್ಟಿಸುವಾಗ, ನಾವು ಕೆಲವರಲ್ಲಿ ಅತ್ಯಂತ ಹೆಚ್ಚಿನ ನಷ್ಟ, ಶಿಥಿಲವಾಗುವಿಕೆ ನೀತಿಭ್ರಷ್ಟತೆಯು ಮಾನಸಿಕವಾಗಿದೆ, ಮತ್ತೆ ಕೆಲವರಲ್ಲಿ ನೈತಿಕವಾಗಿದೆ, ಇನ್ನೂ ಕೆಲವರಲ್ಲಿ ದೈಹಿಕವಾಗಿದೆ ಎಂಬುದನ್ನು ನೋಡುತ್ತೇವೆ. ಆದಾಗ್ಯೂ ಎಲ್ಲರೂ ಎಲ್ಲಾ ವಿಧವಾಗಿ ಕಳಂಕವುಳ್ಳವರಾಗಿದ್ದಾರೆ ಹಾಗೂ ನಿರಾಶಾದಾಯಕವಾಗಿ ಈ ಶಾಪದ ದೆಸೆಯಿಂದ ಎಲ್ಲರನ್ನೂ "**ಕಳೆದು**"ಕೊಂಡಿದ್ದಾರೆ. ತಾವು ಜನಿಸಿರುವ ಭ್ರಷ್ಟತೆಯ ದಾಸತ್ವದಿಂದ ತಾವಾಗಿಯೇ ಬಿಡುಗಡೆ ಹೊಂದುವ ನಿರೀಕ್ಷೆಯು ಯಾರಿಗೂ ಇಲ್ಲವಾಗಿದೆ. ಯಾಕೆಂದರೆ – **"ಹುಟ್ಟಿದಂದಿನಿಂದ ನಾನು ಪಾಪಿಯೇ; ಮಾತೃ ಗರ್ಭವನ್ನು ಹೊಂದಿದ ದಿನದಿಂದಲೂ ದ್ರೋಹಿಯೇ"** (ಕೀರ್ತನೆ 51:5) ಎಂದು ಬರೆದದೆ. ಈ ಮರಣ–ಶಾಪವು ನಾವು ಹುಟ್ಟಿದ ದಿನದಿಂದಲೇ ನಮ್ಮ ಮೇಲಿದೆ. ಆದುದರಿಂದ ಅದು ನಮ್ಮ ವ್ಯಕ್ತಿಗತವಾದ ಪಾಪಗಳ ಕಾರಣದಿಂದಲ್ಲ, ಆದರೆ ವಂಶಪಾರ್ಯಂಪರ್ಯವಾಗಿ ಬಂದ ಪಾಪದ ಫಲವಾಗಿಯೇ – ಅಂದರೆ ತಂದೆಯಾದ ಆದಾಮನ ಶಾಪವು ಅಥವಾ ಕೇಡು ನಮ್ಮನ್ನು ವಂಶ ಪಾರಂಪರ್ಯವಾಗಿ ತಲುಪಿರುವ ಕಾರಣದಿಂದಲೇ ಎಂಬುದನ್ನು ಇದು ನಿರೂಪಿಸುತ್ತದೆ.

"ನಾವು ಸಾಯುವವರಾಗಿಯೇ ಹುಟ್ಟಿದ್ದೇವೆ" ಎಂಬ ಹೇಳಿಕೆ ಇದೆ. ಇದು ಎಷ್ಟರ ಮಟ್ಟಿಗೆ ಸತ್ಯವಾಗಿದೆ ಎಂದು ಇವುಗಳು ಸಾಕ್ಷಿಹೇಳುತ್ತವೆ – ರೋಗ–ರುಜಿನಗಳು, ಕ್ಷಯಿಸುವಿಕೆ, ಮಾನಸಿಕ ಕ್ಷೋಭೆ, ಬೇನೆಗಳು ಮತ್ತು ನೋವುಗಳು, ಬಲಹೀನತೆಗಳು ಇವುಗಳು ನಮ್ಮಲ್ಲಿ ಮರಣದ ಪ್ರಾಥಮಿಕ ಪ್ರಕ್ರಿಯೆಗಳಾಗಿ ಕೆಲಸಮಾಡುತ್ತಿವೆ ಎಂದು ಹೇಳುತ್ತವೆ. ಈ ರೀತಿಯಲ್ಲಿ, ಇದು ದೇವರ ಯೋಜನೆಗಳ ಬಗ್ಗೆ ಸೈತಾನನ ಮಹಾ ಮೋಸಕರವಾದ ತಪ್ಪು ನಿರೂಪಣೆಯಿಂದಾಗಿರುವ ಕುರುಡುತನವಲ್ಲವಾದರೆ, ಮಾನವನು ಎಲ್ಲಾ ಕಡೆಗಳಲ್ಲಿಯೂ ಶಾಪವಾದ – ಸತ್ಯದ ಪ್ರಕಟಣೆಯನ್ನು ಸ್ಪಷ್ಟವಾಗಿ ಕೂಡಲೇ ಕಾಣುತ್ತಾನೆ.

ಅಪೋಸ್ತಲನು ಹೇಳುವಂತೆ **"ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ"** (ರೋಮಾ. 1:18). ಅಪೋಸ್ತಲನು ಮುಂದಣ ಜೀವನದಲ್ಲಿ ಮತ್ತು ಯಾತನೆಯ ಬೆಂಕಿಯಲ್ಲಿ ದೇವರ ಕ್ರೋಧವು ಪ್ರಕಟಗೊಳ್ಳುತ್ತದೆ ಎಂದು ಹೇಳುವುದಿಲ್ಲ. ಆದರೆ ಆತನು ಇದು ಪ್ರಸ್ತುತ ಜೀವಮಾನಕಾಲದಲ್ಲಿಯೇ ನಡೆಯುವುದಾಗಿದೆ ಮತ್ತು ಇದನ್ನು ಈ ಪ್ರಕರಣದ ಸತ್ಯ ಸಂಗತಿಯನ್ನು ನೋಡಲು ಸತ್ಯಪ್ರಕಾಶದ ಕಣ್ಣುತೆರೆದವರೆಲ್ಲರೂ ನೋಡುತ್ತಾರೆ ಎಂದು ಸರಿಯಾಗಿ ಹೇಳುವವನಾಗಿದ್ದಾನೆ. ದೇವರ ಕ್ರೋಧವು ಪ್ರತಿಯೊಂದು ವೈದ್ಯಕೀಯ ಸಂಕೇತದಿಂದ ಪ್ರಕಟಗೊಳ್ಳುತ್ತದೆ. ಇದು ಕಾಯಿಲೆ ಮತ್ತು ಮರಣದ ಕ್ರಿಯೆಗಳು ಜನಾಂಗಗಳಲ್ಲಿ ಕಾರ್ಯವೆಸಗುತ್ತಿರುವುದನ್ನು ಸೂಚಿಸುತ್ತದೆ. ದೇವರ ಕೋಪವು ಪ್ರತಿಯೊಬ್ಬ ಶವಸಂಸ್ಕಾರದ ಗುತ್ತಿಗೆದಾರನ ಸಂಕೇತದಲ್ಲಿ ಪ್ರಕಟವಾಗುತ್ತದೆ. ಇದು ಮಾನವನು ಸಾಯುತ್ತಿದ್ದಾನೆ ಮತ್ತು ದೇವರ ಕೋಪವು, ದೇವರ ಶಾಪವು ನಮ್ಮ ಮೇಲೆ ನೆಲೆಯಾಗಿದೆ ಎಂಬುದನ್ನು ನಮ್ಮ ಗಮನಕ್ಕೆ ತರುತ್ತದೆ. ದೇವರ ಕೋಪವು ನಮಗೆ ಪ್ರತಿಯೊಂದು ಶವಯಾತ್ರೆಯಲ್ಲಿ, ಪ್ರತಿಯೊಂದು ಶವ ವಾಹನದಲ್ಲಿ, ಮತ್ತು ಸಮಾಧಿ ಕಲ್ಲುಗಳಲ್ಲಿ ಪ್ರಕಟಗೊಳ್ಳುತ್ತದೆ. ಪ್ರತಿಯೊಂದು ಸೂತಕ ಸೂಚಕವಾದ ಕಪ್ಪು ಬಟ್ಟೆಯಲ್ಲಿಯೂ, ಲಾಂಛನದಲ್ಲಿಯೂ ದೇವರ ಕ್ರೋಧವು ಪ್ರಕಟಗೊಳ್ಳುತ್ತದೆ. ದೇವರ ಕ್ರೋಧವು ಕೇವಲ ಭೀಭತ್ಸನಾದ ಪಾಪಿಯ ಬಗ್ಗೆ ಮಾತ್ರವಲ್ಲ, ಎಲ್ಲಾ ಅನೀತಿವಂತರ ಬಗ್ಗೆಯೂ, ಅಲ್ಪರಾದರೂ ಸರಿಯೇ ಅವರ ಮೇಲೆಯೂ ಪ್ರಕಟಗೊಳ್ಳುತ್ತದೆ. ಆದುದರಿಂದ ಇದರಿಂದ ಪಾರಾಗಲು ಸಾಧ್ಯವೇ ಇಲ್ಲ. ಯಾಕೆಂದರೆ ನೀತಿವಂತನು ಒಬ್ಬನೂ ಇಲ್ಲ, ಇಲ್ಲವೇ ಇಲ್ಲ. ಹೀಗಿರುವುದರಿಂದ ಶಿಶುಗಳಿಂದ ಹಿಡಿದು ನೆರತ ಕೂದಲಿನ ಮುದಿಪ್ರಾಯದವರೂ ಸಹಾ ದೇವರ ಈ "ಕ್ರೋಧ"ಕ್ಕೂ, "ಶಾಪ"ಕ್ಕೂ ತುತ್ತಾಗುವವರಾಗಿದ್ದಾರೆ.

ಪ್ರವಾದಿಯಾದ ಯೋಬನು ಕೋಪ ಮತ್ತು ಶಾಪದ ದುರವಸ್ಥೆಯಲ್ಲಿ ಪರಿತಪಿಸುತ್ತಿರುವಾಗ **"ನೀನು ನನ್ನನ್ನು ಪಾತಾಳದಲ್ಲಿ ಬಚ್ಚಿಟ್ಟು ನಿನ್ನ ಕೋಪವು ಇಳಿಯುವ ಪರ್ಯಂತ ನನ್ನನ್ನು ಮರೆಮಾಡಿ ನನಗೆ ಅವಧಿಯನ್ನು ಗೊತ್ತುಮಾಡಿ (ಕಡೆಯಲ್ಲಿ) ನನ್ನನ್ನು ಜ್ಞಾಪಿಸಿಕೊಂಡರೆ ಎಷ್ಟೋ ಒಳ್ಳೇದು"** ಎಂತಲೂ **"ನೀನು ಕರೆದರೆ ಉತ್ತರ ಕೊಡುವೆನು. ನೀನು ಸೃಷ್ಟಿಸಿದ ನನ್ನ ಮೇಲೆ ನಿನಗೆ ಹಂಬಲ ಹುಟ್ಟೀತು"** ಎಂತಲೂ ಮೊರೆಯಿಡುತ್ತಾನೆ (ಯೋಬ 14:13, 15). ಈ "ಕ್ರೋಧ"ಕ್ಕೆ ಈಗ ಸುಮಾರು 6000 ವರ್ಷಗಳು ಕಳೆದಿದ್ದು ಇದಕ್ಕೆ ದೇವರು ಮುಯ್ಯಿ ತೀರಿಸುವ ಆ ಮಹಾ ದಿನದಲ್ಲಿ ಒಂದು ಮುಕ್ತಾಯ ಬರಬೇಕಿದೆ. ಆ ದಿನದಲ್ಲಿ ಮಾನವನು ತನಗೆ ಒದಗಿ ಬಂದ ಅವಕಾಶಗಳನ್ನು ಕಳಕೊಂಡ ಕಾರಣ ಮತ್ತು ಕ್ರೈಸ್ತ ಪ್ರಪಂಚಕ್ಕೆ ಚೆನ್ನಾಗಿ ತಿಳಿದಿರುವ ನೀತಿವಂತಿಕೆಯ ನಿಯಮಗಳಿಗೆ ವಿಧೇಯನಾಗಲು ನಿರಾಕರಿಸಿದ್ದರಿಂದ ಆತನ ಮೇಲೆ ಇನ್ನೂ ಅಧಿಕವಾದ ತೊಂದರೆಗಳು ಬರುತ್ತವೆ ಎಂದು ನ್ಯಾಯವು ಪ್ರಕಟಿಸುತ್ತದೆ. ಆದುದರಿಂದ ಈ ಪ್ರತಿಕಾರದ ದಿನವು ಮತ್ತು ಈ ಹಿಂದೆ ಇದ್ದದುಕ್ಕಿಂತ ಹೆಚ್ಚಾದ ದೇವರ ರೌದ್ರವುಳ್ಳದ್ದಾಗಿದ್ದು ಜನಾಂಗವು ಉಂಟಾದಂದಿನಿಂದ ಅಂದಿನವರೆಗೂ ಸಂಭವಿಸದಂಥ ಸಂಕಟವು ಸಂಭವಿಸುವ ಸಮಯವಾಗಿದೆ. ಲೋಕದ ಮೇಲೆ ಬರುವ ಇವೆಲ್ಲವುಗಳೊಳಗಿಂದ ತಪ್ಪಿಸಿ ಕೊಳ್ಳುವದಕ್ಕೂ ಮತ್ತು ದೇವಕುಮಾರನ ಮುಂದೆ ನಿಲ್ಲುವುದಕ್ಕೆ ದೇವಭಕ್ತರು ಅರ್ಹರು ಎಂಬ ಭರವಸೆಯುಂಟು. ಆದರೆ ಅವರು ಈ ವಿಶೇಷ ರೌದ್ರದಿಂದ ತಪ್ಪಿಸಿಕೊಳ್ಳ ಬಹುದೇ ಹೊರತು ಸಾಮಾನ್ಯವಾದ ಕ್ರೋಧದಿಂದಲ್ಲ. ಇದು ಎಲ್ಲಾ ಅನೀತಿವಂತರ ಮೇಲೂ ಪರಲೋಕದಿಂದ ಪ್ರಕಟವಾಗಲಿದೆ. ಅವರು ಇದನ್ನು ಲೋಕದವರೊಂದಿಗೆ ಅನೇಕ ರೀತಿಯಲ್ಲಿ ಹಂಚಿ ಕೊಳ್ಳುವರು. ಆದರೂ ಶ್ರೇಷ್ಟವಾದ ಸೆಳೆತದ ವಿಶೇಷ ಲಕ್ಷಣ ಇದ್ದೇ ಇರುತ್ತದೆ. ಇದನ್ನು ದೇವರ ವಾಕ್ಯದಲ್ಲಿ ಸ್ಪಷ್ಟವಾಗಿ ಈ ರೀತಿಯಾಗಿ ಕಾಣಬಹುದಾಗಿದೆ :–

ಈ ಸುವಾರ್ತಾಯುಗದಲ್ಲಿ ಯಾರು ಕ್ರಿಸ್ತನನ್ನು ಅಂಗೀಕರಿಸುತ್ತಾರೋ ಮತ್ತು ತಮ್ಮನ್ನು ಆತನಿಗೆ ಸಂಪೂರ್ಣವಾಗಿ ಪ್ರತಿಷ್ಟಿಸಿಕೊಳ್ಳುತ್ತಾರೋ ಅಂಥವರು ಮರಣದಿಂದ ಪಾರಾಗಿ ನಿತ್ಯಜೀವಕ್ಕೆ ಸೇರಿದವರೆಂದು ಎಣಿಸಲ್ಪಡುತ್ತಾರೆ; ಅವರು ಶಾಪದ ಕ್ರೋಧದಿಂದ ತಪ್ಪಿಸಿಕೊಂಡವರಾಗಿದ್ದಾರೆ. **"ಲೋಕದಲ್ಲಿ ದುರಾಶೆ ಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಾಭಾವದಲ್ಲಿ ಪಾಲನ್ನು ಹೊಂದುವವರೂ, ತಪ್ಪಾದ ಮಾರ್ಗದಲ್ಲಿ ನಡೆಯುವವರ ಸಹವಾಸದಿಂದ ಹೊಸದಾಗಿ ತಪ್ಪಿಸಿಕೊಂಡವರೂ, ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾದ ಜ್ಞಾನಹೊಂದಿ ಲೋಕದ ಮಲಿನ್ವಗಳಿಗೆ ತಪ್ಪಿಸಿಕೊಂಡವರೂ ಆಗುತ್ತಾರೆ"** (2 ಪೇತ್ರ 1:4, 2:18 ಮತ್ತು 20 ಇವುಗಳನ್ನು ನೋಡಿರಿ). ಅವರು ಇನ್ನೂ ಈ ಲೋಕದಲ್ಲಿಯೇ ಇದ್ದಾರೆ ಸರಿ, ಇನ್ನೂ ಮರಣಕ್ಕೆ ತುತ್ತಾಗುವವರಾಗಿದ್ದಾರೆ, ಇನ್ನೂ ಈ ಲೋಕದಲ್ಲಿ ಶಾಪದ ಸಂಭವನೀಯಗಳಾದ ಕಾಯಿಲೆ, ನೋವು, ದುಃಖ ಮತ್ತು ತೊಂದರೆಗಳಲ್ಲಿ ಪಾಲು ತೆಗೆದುಕೊಳ್ಳುತ್ತಾರೆ ಮತ್ತು

ಲೋಕದ ದೃಷ್ಟಿಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ ; ಆದರೆ ವಿಶ್ವಾಸಿಗಳ ದೃಷ್ಟಿಯಾಗಿರುವ ದೇವರ ದೃಷ್ಟಿಯಲ್ಲಿ ಅಗಾಧವಾದ ವ್ಯತ್ಯಾಸಗಳಿವೆ. ಅಂಥವರು ಇನ್ನುಮುಂದೆ ದೇವರ ಶಾಪ ಅಥವಾ ಕ್ರೋಧದ ಕಾರಣ ಸಾಯುವವರು ಎಂದು ಪರಿಗಣಿಸಲ್ಪಡುವುದಿಲ್ಲ. ಆದರೆ ಅವರ ನೀತಿನಿರ್ಣಯದ ದೃಷ್ಟಿಯಲ್ಲಿ ಮತ್ತು ಅನಂತರದಲ್ಲಿ ಜೀವವುಳ್ಳ ಯಜ್ಞಗಳಾಗಿ ಸಮರ್ಪಿಸಿಕೊಂಡಿರುವ ಕಾರಣ ಅವರ ಮರಣವನ್ನು ಕ್ರಿಸ್ತನ ಸಮರ್ಪಣೆಯ ಭಾಗವೆಂದು ಎಣಿಕೆಮಾಡಲಾಗುವುದು. ಅಪೋಸ್ತಲನು ಇದನ್ನು ಹೇಳುವಂತೆ, ಅಂಥವರ ಮರಣವನ್ನು ಅವರು ಕ್ರಿಸ್ತನೊಂದಿಗೆ ಮರಣಹೊಂದಿದವರೆಂದೂ, ಆತನ ತ್ಯಾಗಬಲಿದಾನದಲ್ಲಿ ಪಾಲುದಾರರೆಂದೂ, ಉಳಿದ ಜನಾಂಗದವರಂತೆ ಆದಾಮನ ವಶದಲ್ಲಿ ಸತ್ತವರಲ್ಲವೆಂದೂ, ಪರಿಗಣಿಸಲಾಗುವುದು. – **"ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ"** – ರೋಮಾ 6:8.

ಅದರಂತೆ ಶಾರೀರಿಕ ನೋವು ಹಾಗೂ ತೊಂದರೆಗಳಲ್ಲಿನ ನಮ್ಮ ಪಾಲುದಾರಿಕೆಯು ಶಾರೀರಿಕ ಬಲಹೀನತೆ, ವಂಶಪಾರ್ಯಂಪರ್ಯ ಮುಂತಾದವುಗಳ ಫಲವಾಗಿದೆ. ಈ ರೀತಿಯಾಗಿ ಅನುಮತಿಸಿರುವ ಯಾವುದನ್ನು ಅದು ದೇವರ ಕೋಪದ ಪ್ರಕಟಣೆ ಎಂಬುದಾಗಿ ತಿಳಿಯಬಾರದು ಎಂದು ದೇವರು ನಮಗೆ ಖಾತ್ರಿಯಾಗಿ ಹೇಳುವವನಾಗಿದ್ದಾನೆ ; ಆದರೆ, ಇವರ ಮೇಲೆ ಬರುವ ಎಲ್ಲಾ ಕೇಡುಗಳನ್ನು, ಇವರ ಒಳಿತಿಗಾಗಿ, ದೇವರ ಜ್ಞಾನ, ಪ್ರೀತಿ ಮತ್ತು ಶಕ್ತಿಯಿಂದ ತಳ್ಳಿಹಾಕಲ್ಪಡುವುದು (ರದ್ದು ಮಾಡಲ್ಪಡುವುದು). ಇವರು ಆತನ ಶಿಷ್ಯರಾಗಿ ಆತನ ಆತ್ಮವನ್ನು ಹೆಚ್ಚಾಗಿ ಅಭಿವೃದ್ಧಿಪಡಿಸಿಕೊಳ್ಳಬೇಕು. ಕಡೆಗೆ, ಆತನ ಮಕ್ಕಳಾಗಿ ಘನ, ಮಾನ, ಮಹಿಮೆ ಹೊಂದಲು ಯೋಗ್ಯರಾಗಲು – ಶಾಂತಿದಾಯಕ ಫಲಗಳನ್ನು ಹೊಂದಲು ಕಾರ್ಯವೆಸಗಬೇಕು. ಈ ರೀತಿಯಲ್ಲಿ ಅವರನ್ನು ಇನ್ನೂ ಹೆಚ್ಚಿನ ನಿತ್ಯನಿರಂತರವಾದ ಮಹಿಮೆಯ ಪ್ರಾಮುಖ್ಯತೆಗಾಗಿ ಸಿದ್ಧಪಡಿಸುವುದಾಗಿದೆ (ಫಿಲಿಪ್ಪಿ 2:13, ರೋಮಾ. 2:7, ಇಬ್ರಿಯ 2:11; 2 ಕೊರಿಂಥ 4:17; 2 ಪೇತ್ರ 1:4–11). ಪರಂತು, ಈ ಎಲ್ಲಾ ಸಂಗತಿಗಳಲ್ಲಿಯೂ ಇವರುಗಳು ನೋಡಿ ನಡೆಯದೆ ನಂಬಿಕೆಯಿಂದಲೇ ನಡೆಯುತ್ತಾರೆ. ಬಾಹ್ಯ ದೃಷ್ಟಿಯಲ್ಲಿ ಹೇಳಬೇಕಾದರೆ ಪ್ರಪಂಚಕ್ಕಿಂತ ಹೆಚ್ಚಿನದೇನೂ ಇರುವುದಿಲ್ಲ. ದೇವರ ಜನರಿಗೆ ಕೆಲವೊಮ್ಮೆ ಸಾಮಾನ್ಯ ಮನುಷ್ಯರಿಗಿಂತ ಹೆಚ್ಚಿನ ಕಷ್ಟಗಳು, ಪರೀಕ್ಷೆಗಳು, ತೊಂದರೆಗಳು, ನೋವುಗಳೂ ಬರುವಂತೆ ಕಂಡುಬರುತ್ತದೆ. ಯಾಕೆಂದರೆ ಇವರೊಡನೆ ದೇವರಿನ್ನೂ ವ್ಯವಹರಿಸುತ್ತಿಲ್ಲ. ಯಾಕೆಂದರೆ ಅವರನ್ನು ಆತನೊಡನೆ ಪ್ರಾಯಶ್ಚಿತ್ತ ಸಂಧಾನಕ್ಕೆ ಅಥವಾ ಪಾಪನಿವೃತ್ತಿಯ ಸ್ಥಿತಿಗಾಗಲೀ ತಂದಿರುವುದಿಲ್ಲ. ನಂಬಿಕೆಯ ಈ ಹೆಚ್ಚಳದ ಅಗತ್ಯತೆಯೂ ತಾನಾಗಿಯೇ ಒಂದು ಆಶೀರ್ವಾದ, ಕ್ರಮಬದ್ಧತೆ, ಗುಣಲಕ್ಷಣದ ಅಭಿವೃದ್ಧಿಯೂ, ಆತ್ಮನ ಫಲವೂ ಆಗಿದೆ.

ಆದರೆ ನಾವು ನಮ್ಮ ಪ್ರಸ್ತಾಪವನ್ನು ಅಂದರೆ ಪಾಪನಿವೃತ್ತಿಯ ಅಗತ್ಯತೆಯನ್ನು ಸಾಮಾನ್ಯವಾಗಿ ಲೋಕದ ದೃಷ್ಟಿಯಲ್ಲಿ ಎಲ್ಲಾ ಮಾನವ ಜಾತಿಯವರ ದೃಷ್ಟಿಯಲ್ಲಿ ನೋಡುವವರಾಗಿದ್ದೇವೆ. ಶಾಪ, ದಂಡನೆ ಅಥವಾ ಎಲ್ಲಾ ಅಸಂಪೂರ್ಣತೆಗಳ ವಿರುದ್ಧವಾದ ದೈವ ನಿಯಮದ ತೀರ್ಪು ನಾಶನವಾಗಿದೆ. ದೇವರು ಎಲ್ಲಾ ಸಂಗತಿಗಳನ್ನೂ ಒಳ್ಳೆಯದಾಗಿಯೇ ಸೃಷ್ಟಿಸಿದನು. ಯಾವುದೇ ಆಗಲೀ ಆತನಿಗೆ ಸಂಪೂರ್ಣವಾಗಿ ತೃಪಿಕರವಾಗಿರಬೇಕೆಂಬುದು ಮಾತ್ರವೇ ಒಂದು ಷರತ್ತಾಗಿತ್ತು. ಈಗ ಸ್ವಲ್ಪ ಸಮಯಕ್ಕೆ ಆತನು ಅಸಮರ್ಪಕವಾದ ಸಂಗತಿಗಳಿಗೆ, ವ್ಯಕ್ತಿಗಳಿಗೆ ಮತ್ತು ಸ್ಥಿತಿಗಳಿಗೆ ಅನುಮತಿಸುತ್ತಾನೆ ಎಂಬುದು ಆತನ ಯೋಜನೆಯಲ್ಲಿ ಬದಲಾವಣೆ ಉಂಟೆಂಬುದಕ್ಕೆ ಸಾಕ್ಷ್ಯವಲ್ಲ. ಈ ಅಸಮರ್ಪಕವಾದ ಸಮಯವನ್ನು ಅನುಮತಿಸಿರುವ ಕಾರಣವೇನೆಂದರೆ ದೇವರ ಜ್ಞಾನವು ಮಹಿಮೆಯುಳ್ಳ ಫಲಿತಾಂಶದ ಸಾಧ್ಯತೆಯನ್ನು ಪೂರ್ವಭಾವಿಯಾಗಿ ಕಂಡುಕೊಂಡಿದೆ. ಈ ದೆಸೆಯಲ್ಲಿ ದೇವರು **"ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿಪಡಿಸಬೇಕೆಂದು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ತನ್ನ ಸಂಕಲ್ಪದ ಮೇರೆಗೆ ಆದಿಯಲ್ಲಿಯೇ ನಮ್ಮನ್ನು ಆರಿಸಿಕೊಂಡಿದ್ದಾನೆ"** (ಎಫೆಸ 1:11–12). ಉದಾಹರಣೆಗಾಗಿ, ಆತನು ಸೈತಾನನು ಅಪರಾಧಿಯಾದ ಕ್ಷಣದಿಂದಲೇ ಆತನನ್ನು ನಾಶಗೊಳಿಸಿದ್ದರೆ, ಅದರಂತೆ ಬಿದ್ದುಹೋದ ದೇವದೂತರುಗಳನ್ನೂ, ಮಾನವರನ್ನೂ ಸಹಾ ನಾಶಗೊಳಿಸಿದ್ದರೆ ಅಸಮರ್ಪವಾದ ಸಂತಾನವೇ ಇಲ್ಲವಾಗುತ್ತಿತ್ತು. ಆದರೆ, ದೇವರ ಯೋಜನೆಯು ಇದಕ್ಕೆ ವ್ಯತಿರಿಕ್ತವಾಗಿದೆ. ಅದು ಅಸಮರ್ಪಕ ಸಂಗತಿಗಳನ್ನು, ಪಾಪವನ್ನು ಸಧ್ಯಕ್ಕೆ ಅವರದೇ ಆದ ಕ್ರಮದಲ್ಲಿ ಆದರೆ ದೇವರ ವ್ಯವಸ್ಥೆಗೆ ದಕ್ಕೆಯಾಗದಿರುವಂತೆ ಕೈಗೊಳ್ಳುವಂತೆ ಅನುಮತಿಸಿದ್ದಾನೆ. ಈ ರೀತಿಯಾಗಿ ಸೈತಾನನ, ಪತನಗೊಂಡ ದೇವದೂತರುಗಳ ಮತ್ತು ಮಾನವ ಜಾತಿಯ ಧೋರಣೆಗಳ ಒಂದು ಉದಾಹರಣೆಯು ಪಾಪದಿಂದ ಅವನತಿಯ ಪ್ರವೃತ್ತಿಯ ದೃಷ್ಟಾಂತವಾಗಿ ಪ್ರಸ್ತುತಿಗೊಳ್ಳುವಂತೆ ಮಾಡಿದ್ದಾನೆ.

ಮಾನವ ಜಾತಿಯು ಮರಣ ದಂಡನೆಗೂ, ನಾಶನಕ್ಕೂ ಗುರಿಯಾಗಲು ಪರೋಕ್ಷವಾದ ಕಾರಣವೆಂದರೆ ಹವ್ವಳ

ತಿಳುವಳಿಕೆಯ ಕೊರತೆ ಮತ್ತು ಅದರ ಪರಿಣಾಮ ವಂಚನೆಗೆ ತುತ್ತಾದದ್ದು. ಇದು ಸ್ವೇಚ್ಛೆಯಿಂದಾಗಲೀ, ಬುದ್ಧಿಪೂರ್ವಕದಿಂದಾಗಲೀ ದೇವರ ಆಜ್ಞೆಯನ್ನು ಉಲ್ಲಂಘನೆ ಮಾಡದಿರುವ ಅನೇಕರಿಗೆ ವಂಶಪಾರ್ಯಂಪರ್ಯವಾಗಿ ಹರಿದುಬಂತು. ಈ ಸತ್ಯತೆಯು ದೇವರ ಪ್ರೀತಿಯು ಮತ್ತು ಆತನ ಕ್ಷಮಾಪಣೆ ಮುಕ್ತವಾಗಿ ತನ್ನ ಕಾರ್ಯವೆಸಗುವಂತೆ ಅವಕಾಶವನ್ನುಂಟುಮಾಡಿತು. ಸಂಭವನೀಯವಾಗಿ ದೇವರ ಗುಣಧರ್ಮಗಳ ಮತ್ತು ಸುಸಂಘಟನೆಗಳ ಉದಾಹರಣೆಯನ್ನು ನೀಡುವುದಾಯಿತು. ಇವುಗಳು ಬೇರೆ ಯಾವ ರೀತಿಯಲ್ಲಿಯೂ ನಾವು ಕಲ್ಪಿಸಿಕೊಳ್ಳುವಂತೆ ಇಷ್ಟರ ಮಟ್ಟಿಗೆ ಸಾಧ್ಯಂತವಾಗಿ ಪ್ರಕಟಗೊಳ್ಳಲು ಸಾಧ್ಯವಿದ್ದಿಲ್ಲ. ಆದುದರಿಂದ ಇದು ಸೃಷ್ಟಿಕರ್ತನಾದ ದೇವರು ತನ್ನನ್ನು, ತನ್ನ ಗುಣಲಕ್ಷಣಗಳನ್ನು ತನ್ನ ಸೃಷ್ಟಿಗಳಿಗೆ – ಮಾನವ ಜಾತಿಯವರಿಗೆ ಮಾತ್ರವಲ್ಲ, ದೇವದೂತರ ಸಮೂಹದವರಿಗೂ ಸಹಾ ಪ್ರಕಟಿಸಿಕೊಳ್ಳುವ ಆತನ ಮೂಲ ಉದ್ಧೇಶದ ಭಾಗವಾಗಿದೆ. ಪ್ರಶ್ನಾತೀತವಾಗಿ, ರಕ್ಷಣೆಯ ಮಹಾ ಯೋಜನೆಯು ಸಂಪೂರ್ಣವಾಗಿ ನೆರವೇರುವಾಗ, ಪರಲೋಕದ ದೇವದೂತರುಗಳು ಮತ್ತು ಈ ಲೋಕದ ಪುನಃಸಂಧಾನಗೊಂಡವರು ದೇವರ ಗುಣಲಕ್ಷಣಗಳನ್ನು – ಜ್ಞಾನ, ನ್ಯಾಯ, ಪ್ರೀತಿ ಮತ್ತು ಶಕ್ತಿ ಇವುಗಳನ್ನು ಹಿಂದೆಂದೂ ಮೆಚ್ಚಿಕೊಳ್ಳದ ಬಹಳ ಹೆಚ್ಚಾದ ಮಟ್ಟದಲ್ಲಿ ಅರಿತುಕೊಳ್ಳುವರು. ಈಗ ಪಾಪವನ್ನು ಅನುಮತಿಸಿರುವುದರಿಂದ ದೊರೆಯುವ ದೊಡ್ಡ ಪಾಠಗಳ ಮತ್ತು ಕ್ರಿಸ್ತನ ಮೂಲಕ ವಾಗ್ದಾನಮಾಡಲ್ಪಟ್ಟಿರುವ ವಿಮೋಚನಾ ಯೋಜನೆಯು ಸಹಾಯವಿಲ್ಲದೇ ತಿಳಿದುಕೊಳ್ಳ ಬಹುದಿತ್ತು. ಇದನ್ನು ಅಪೋಸ್ತಲನಾದ ಪೇತ್ರನು ತಿಳಿಸುವವನಾಗಿದ್ದಾನೆ ಆತನು **"ದೇವದೂತರಿಗೂ ಈ ಸಂಗತಿಗಳನ್ನು ಲಕ್ಷ್ಯವಿಟ್ಟು ನೋಡಬೇಕೆಂಬ ಅಪೇಕ್ಷೆ ಉಂಟು"** (1 ಪೇತ್ರ 1:12) ಎಂದು ಬರೆದಿದ್ದಾನೆ.

ನಾವು ಕಂಡುಕೊಂಡಿರುವಂತೆ, ಮಾನವ ಜಾತಿಯ ಮೇಲೆ ಬಂದ ತೀರ್ಪು ನಿರಪೇಕ್ಷವಾಗಿ ನ್ಯಾಯಯುತ ವಾದುದ್ದು ಮತ್ತು ಈ ದಂಡನೆಯ ವಿರುದ್ಧ ನ್ಯಾಯದ ಆಧಾರದಲ್ಲಿ ಮೇಲ್ಮನವಿ ಮಾಡುವ ಯಾವುದೇ ಅವಕಾಶಗಳಿರುವುದಿಲ್ಲ (ಆದಾಮನಿಗೆ ತನ್ನ ಸೃಷ್ಟಿಕರ್ತನ ಬಗ್ಗೆ ಮತ್ತು ಆತನ ಆಜ್ಞೆಯಲ್ಲಿ ಸೂಚಿತವಾಗಿರುವುದಕ್ಕೆ ವಿಧೇಯನಾಗಲು ಸಾಕಷ್ಟು ತಿಳುವಳಿಕೆ ಇತ್ತು ಎಂಬುದು ಒಪ್ಪಬೇಕಾದುದು. ಅದೇ ಸಮಯದಲ್ಲಿ ದೇವರು ಉಂಟುಮಾಡಿದ ಜೀವವನ್ನು ಆತನ ನೀತಿವಂತಿಕೆ ಮತ್ತು ಔದಾರ್ಯಗಳನ್ನು ಉಪಯೋಗಿಸಿಕೊಂಡು ನಾಶಪಡಿಸಿ ಕೊಳ್ಳಬಾರದು ಎಂಬುದು ಸಹಾ ದೇವರ ಪಾಲಿನ ನ್ಯಾಯವಾದ ವ್ಯವಸ್ಥೆಯಾಗಿತ್ತು ಎಂಬುದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ). ಪರಂತು, ನ್ಯಾಯ ತತ್ವಗಳನ್ನು ಉಲ್ಲಂಘಿಸದೆ ದೇವರು ಬೇರೆ ವಿಧವಾದ ದಂಡನೆಯನ್ನು ಮನುಷ್ಯರ ಬಗ್ಗೆ ಯೋಚಿಸಬಹುದಿತ್ತು ಎಂಬುದನ್ನೂ ನಾವು ಸರಾಗವಾಗಿ ನೋಡುತ್ತೇವೆ. ಬಿದ್ದು ಹೋದ ದೇವದೂತರುಗಳ ಬಗ್ಗೆ ನಮಗೆ ಈ ಬಗ್ಗೆ ಸಾಕ್ಷ್ಯಗಳಿವೆ. ಅವರನ್ನು ದೇವರು ಮರಣ ದಂಡನೆಗೆ ಗುರಿಪಡಿಸಲಿಲ್ಲ; ಅವರ ಮೇಲೆ ವಿಧಿಸಿದ ದಂಡನೆಯು ಬೇರೆಯಾಗಿತ್ತು. ಅವರನ್ನು ದೇವರು ನಿತ್ಯವಾದ ಬೇಡಿಗಳನ್ನು ಹಾಕಿ ಮಹಾದಿನದಲ್ಲಿ ಆಗುವ ದಂಡನೆಯ ತೀರ್ಪಿಗಾಗಿ ಕತ್ತಲೆಯೊಳಗೆ ಇಟ್ಟಿದ್ದಾನೆ ಮತ್ತು ಅಂತಿಮ ವಿಚಾರಣೆಗೆ ಇನ್ನೂ ಕಾಯುತ್ತಿರುವರು – ಯೂದ. 6.

ಅದೇ ರೀತಿಯಲ್ಲಿ, ದೇವರು ಮಾನವನನ್ನು ಆತನು ಏದೇನಿನಲ್ಲಿ ಪಾಪಮಾಡಿದಂದಿನಿಂದ ಈವರೆಗೆ ಅಂದರೆ ಸುಮಾರು ಆರು ಸಹಸ್ರ ವರ್ಷಗಳವರೆಗೂ ಆತನ ದೈಹಿಕ ವ್ಯವಸ್ಥೆಗೆ ಯಾವುದೇ ಕುಂದುಂಟಾಗದಂತೆ, ಆತನನ್ನು ದಂಡನೆಗೆ ಮತ್ತು ಮರಣಶಿಕ್ಷೆಗೆ ಒಳಪಡಿಸದೆ ಹಾಗೆಯೇ ಬದುಕಲು ಬಿಡಬಹುದಿತ್ತು. ಈ ರೀತಿಯಲ್ಲಿ ತಮ್ಮ ಮೊದಲಿನ ಸ್ಥಿತಿಯನ್ನು ಕಾಪಾಡಿಕೊಳ್ಳದ ಮಾನವನನ್ನು ಮತ್ತು ದೇವದೂತರುಗಳನ್ನು ಸಹಾ ನ್ಯಾಯತೀರ್ವಿಕೆಯ ಆ ಮಹಾ ದಿನದವರೆಗೂ ಅವರ ಪ್ರಕರಣ ಅಂತಿಮವಾಗಿ ತೀರ್ಮಾನವಾಗುವಂತೆ ಜೀವಂತವಾಗಿ ಕಾಯ್ದಿಡ ಬಹುದಿತ್ತು. ಆದರೆ ದೇವರು ತನ್ನ ಕಾರ್ಯಾಚರಣೆಯಲ್ಲಿ ಸೀಮಿತವಾಗಲಿಲ್ಲ. ಇದನ್ನು ನಾವು ಪ್ರಕೃತಿಯಲ್ಲಿ ಸಹಾ ಗಮನಿಸುತ್ತೇವೆ. ಅದರಲ್ಲಿ ಒಂದು ಹೂವು ತನ್ನ ಅಂದದಲ್ಲಿ ಮತ್ತೊಂದು ಹೂವಿಗಿಂತ ಬೇರೆಯಾಗಿರುತ್ತದೆ. ಅದೇ ರೀತಿ ಒಂದು ಸೃಷ್ಟಿಯು ಮತ್ತೊಂದು ಸೃಷ್ಟಿಗಿಂತ ಭಿನ್ನವಾಗಿರುತ್ತದೆ. ಅಪೋಸ್ತಲನು ಇದನ್ನು "ದೇವರ ನಾನಾ ವಿಧವಾದ ಜ್ಞಾನ" (ಎಫೆಸ 3:10 Diaglott) ಎಂದು ಸೂಚಿಸುತ್ತಾನೆ. ದೇವರು ಪಾಪಮಾಡಿದ ದೇವದೂತರೊಂದಿಗೆ ಒಂದು ರೀತಿಯಲ್ಲಿ ವ್ಯವಹರಿಸುತ್ತಾನೆ. ಅದೇ ಸಮಯದಲ್ಲಿ ಪಾಪ ಮಾಡಿದ ಮಾನವರೊಡನೆ ವ್ಯವಹರಿಸಲು ಮತ್ತೊಂದು ರೀತಿಯನ್ನು ಆರಿಸಿಕೊಳ್ಳುತ್ತಾನೆ. ದೇವರ ರೌದ್ರವು ಇಬ್ಬರ ಮೇಲೆಯೂ ಪ್ರಕಟಗೊಳ್ಳುತ್ತದೆ.; ಇದು ಎಲ್ಲಾ ಪಾಪವನ್ನು, ಎಲ್ಲಾ ಕೆಡುಕನ್ನು ಹೇಸುವ ಮತ್ತು ಅವನ್ನು ನಾಶಪಡಿಸುವ ಪ್ರೀತಿಯ ಮತ್ತು ನ್ಯಾಯದ ಕೋಪವಾಗಿದೆ; ಆದರೆ ಪಾಪದೊಂದಿಗೆ ಮತ್ತು ನೀತಿವಂತಿಕೆಯೊಂದಿಗೆ ದೀರ್ಘಕಾಲದ ಅನುಭವ ಪಡೆದು ಅವುಗಳ ಫಲವನ್ನು ಅನುಭವಿಸಿದ ನಂತರ ಕೆಡಕು ಮಾಡುವವರು ನೀತಿಯ ನಿಷ್ಠಾವಂತ ಸೇವಕರಾಗುವಂತೆ ಮಾಡಬೇಕಾದುದ್ದನ್ನೆಲ್ಲಾ ಮಾಡುತ್ತದೆ.

ಮಾನವರೊಂದಿಗೆ ವ್ಯವಹರಿಸುವಾಗ ದೇವರು ಪಾಪದ ಮತ್ತು ಪಾಪಿಗಳ ಕಟ್ಟಕಡೆಯ ಅಂತ್ಯದಲ್ಲಿ ಅಂದರೆ ನಾಶನವನ್ನು ಮಾದರಿಯಾಗಿಟ್ಟು ಕೊಂಡಿರುತ್ತಾನೆ. ಇದು **"ಪಾಪ ಮಾಡುವ ಪ್ರಾಣಿಯೇ (ಆತ್ಮನೇ) ಸಾಯುವನು"** (ಯೆಹೆಜ್ಕೇಲ 18:4), **"ಪಾಪವು ಕೊಡುವ ಸಂಬಳ ಮರಣ"** (ರೋಮಾ. 6:23) ಮುಂತಾಗಿ ಮಾನವರಿಗೆ ಮಾಡಿದ ವಿವಿಧ ಹೇಳಿಕೆಗಳಲ್ಲಿ ಸಾಕ್ಷ್ಯವಾಗಿ ಕಂಡುಬರುತ್ತದೆ. ಮಾನವರಿಗೆ ಮಾಡಿದ ಈ ಹೇಳಿಕೆಗಳಲ್ಲಿ ದೇವರು ಕೇವಲ ಸಾಮಾನ್ಯವಾದ ನಿಯಮವನ್ನು ಮಾತ್ರವೇ ಹೇಳುತ್ತಾನೆ. ಇದು ಈವರೆಗೆ ಆತನ ರಾಜ್ಯದ ನಿರಪೇಕ್ಷವಾದ ನಿಯಮವಾಗಿದೆ. ಎಲ್ಲಾ ಸೃಷ್ಟಿಗಳು ಅಂದರೆ ಅಸಮರ್ಪಕವಾದವುಗಳೆಲ್ಲಾ ನಾಶಗೊಳ್ಳುತ್ತವೆ, ಕೇವಲ ಸಮರ್ಪಕವಾದವುಗಳು, ನಿರಪೇಕ್ಷವಾಗಿ ಸಂಪೂರ್ಣವಾದವುಗಳು, ದೇವರ ಚಿತ್ತದೊಂದಿಗೆ ಮತ್ತು ಉದ್ದೇಶದೊಂದಿಗೆ ಸಾಮರಸ್ಯವುಳ್ಳವುಗಳು ಮಾತ್ರವೇ ತನಗೆ ಆಶೀರ್ವಾದಕರವಾಗಿ, ದೇವರಿಗೆ ಮಹಿಮೆ ತರುವಂತೆ ಮತ್ತು ಎಲ್ಲಾ ಸೃಷ್ಟಿಗೂ ಲಾಭದಾಯಕವಾಗುವಂತೆ ಸದಾ ಕಾಲಕ್ಕೂ ಉಳುಕೊಳ್ಳುತ್ತವೆ.

ಆದರೆ, ಈ ತತ್ವದ ಕಾರ್ಯಾಚರಣೆಯಲ್ಲಿ ಮಾನವನು ಒಂದು ಉದಾಹರಣೆಯಾಗಿರುವಾಗ ಮಾನವ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಈ ಮರಣದಲ್ಲಿ ತೆಗೆದು ಹಾಕಲ್ಪಡುವಂತೆ "ಮರಣವು ಎಲ್ಲರ ಮೇಲೆಯೂ ಸಾಗಿ ಬರುವುದು" – ಪರಂತು ಮಾನವನನ್ನು ಈ ರೀತಿಯಲ್ಲಿ ದೇವರ ನ್ಯಾಯದ ಕಠೋರತೆಯ, ಕೇಡಿನ ನಿರ್ಮೂಲನೆಯ ಉದಾಹರಣೆಯನ್ನಾಗಿ ಮಾಡಿ ಆತನು ಈ ಕಾರಣದಿಂದ ಶ್ರಮೆಪಡುವುದು ದೇವರ ಉದ್ದೇಶವಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಮಾನವನು ದೇವರ ಬೇರೆ ಯಾವುದೇ ದೇವರ ಸೃಷ್ಟಿಗಿಂತ ಹೆಚ್ಚಾಗಿ ದೇವರ ಕೃಪೆ, ಪ್ರೀತಿ ಮತ್ತು ಕರುಣೆಗಿಂತ ಕಡಿಮೆಯಾದುದ್ದನ್ನು ಅನುಭವಿಸಬಾರದು ಎಂಬುದು ದೇವರ ವ್ಯವಸ್ಥೆಯಾಗಿದೆ. ಆದುದರಿಂದ ಸೂಕ್ತ ಸಮಯದಲ್ಲಿ ದೇವರು ಪ್ರಕರಣದ ಅಗತ್ಯತೆಗಳನ್ನು ಪೂರ್ಣವಾಗಿಸಲು ಸಾಕಾಗುವಂತೆ ಎಲ್ಲರಿಗೂ ವಿಮೋಚನೆಯನ್ನು ಅನುಗ್ರಹಿಸಿದನು. **"ಒಬ್ಬನ (ಆದಾಮನ) ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ (ಕ್ರಿಸ್ತನ) ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು"** – ರೋಮಾ. 5:19.

ಈ ಸುವಾರ್ತಾಯುಗದಲ್ಲಿ ಅನೇಕರು ನೀತಿವಂತರಾಗುವರು ಅಥವಾ ನೀತಿವಂತರಾಗುವುದೇ ಇಲ್ಲ ಎಂದು ಇದು ಹೇಳುವುದೂ ಇಲ್ಲ ಮತ್ತು ಅದರ ಅರ್ಥವೂ ಅಲ್ಲ. ಇದಕ್ಕೆ ವ್ಯತಿರಿಕ್ತವಾಗಿ ದೇವರ ವಾಕ್ಯವು ಹೇಳುವುದೇನೆಂದರೆ, "ಒಂದು ಚಿಕ್ಕ ಹಿಂಡಿನವರು" ಮಾತ್ರವೇ ಈ ಪ್ರಸ್ತುತ ಕೆಡುಕಿನ ಸಮಯದಲ್ಲಿ ನೀತಿವಂತರಾಗುವರು. ಇವರು ದೇವರಿಂದ ವಿಶೇಷವಾಗಿ ಎಳೆಯಲ್ಪಟ್ಟವರೂ ಮತ್ತು ಆತನ ಮಗನೊಂದಿಗೆ ಬಾಧ್ಯಸ್ಥರಾಗಲು ಮಹಾ ಕರೆಯ ಮೂಲಕ ಕರೆಯಲ್ಪಟ್ಟವರೂ ಆಗಿದ್ದಾರೆ. ಕ್ರಿಸ್ತನು (ಶಿರಸ್ಸು ಮತ್ತು ದೇಹವು) ಶ್ರಮೆಯಲ್ಲಿಯೂ, ಮಹಿಮೆಯಲ್ಲಿಯೂ ದೇವರ ಹೇಳಿಕೆಯ ಪ್ರಕಾರ ಎತ್ತಲ್ಪಡದ ಹೊರತು ಉಳಿದ ಮಾನವರು ಕರೆಯಲ್ಪಡುವುದೂ ಇಲ್ಲ, ಎಳೆಯಲ್ಪಡುವುದೂ ಇಲ್ಲ. ಕರ್ತನು ತಾನೇ ಹೇಳುವಂತೆ – **"ನನ್ನನ್ನು ಕಳುಹಿಸಿಕೊಟ್ಟಂಥ ತಂದೆಯು ಎಳೆಯದ ಹೊರತು ಯಾವನೂ ನನ್ನ ಬಳಿಗೆ ಬರಲಾರನು"** (ಯೋಹಾನ 6:44), **"ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು"** (ಯೋಹಾನ 12:32). ಈ ಸಾರ್ವತ್ರಿಕವಾದ ಎಳೆಯೋಣವು ಬರಲಿರುವ ಮಿಲಿಯಾಂತರ ಯುಗಕ್ಕೆ ಸೇರಿದ್ದಾಗಿದೆಯೇ ಹೊರತು ಪ್ರಸ್ತುತ ಕಾಲಕ್ಕಾಗಲೀ, ಹಿಂದಿನ ಕಾಲಗಳಿಗಾಗಲೀ ಸೇರಿದ್ದಲ್ಲ. ಇದು ಹಿಂದಿನಂತೆ ಕೆಲವರನ್ನಾಗಲೀ ಅಥವಾ ಒಂದು ವರ್ಗವನ್ನಾಗಲೀ, ಜನಾಂಗದವರನ್ನಾಗಲೀ ಎಳೆಯುವುದಲ್ಲ. ಇದು ಅಮೂಲ್ಯವಾದ ರಕ್ತದ ಮೂಲಕ ವಿಮೋಚನೆಗೊಂಡ ಇಡೀ ಮಾನವಜಾತಿಯನ್ನೇ ಎಳೆಯುವುದಾಗಿದೆ.

ಪರಂತು, ಈ ಎಳೆಯುವಿಕೆಯು ಕಡ್ಡಾಯವೆಂಬ ಅರ್ಥವಲ್ಲ; ತಂದೆಯ ಎಳೆಯುವಿಕೆಯು ಪ್ರಸ್ತುತ ಯುಗದಲ್ಲಿ ಕೆಲವರಿಗೇ ಸೀಮಿತವಾಗಿರುವುದರಿಂದ ಕರೆಯಲ್ಪಟ್ಟವರು ಬಹುಜನ, ಆಯಲ್ಪಟ್ಟವರು ಸ್ವಲ್ಪ ಜನ. ಅದರಂತೆ ಕ್ರಿಸ್ತೇಸುವಿನ ಎಳೆಯುವಿಕೆಯೂ ಮಾನವ ಜಾತಿಯ ಪ್ರಪಂಚದಿಂದ ಮುಂದಿನ ಯುಗದಲ್ಲಿ ತಡೆಗಟ್ಟಲ್ಪಡಬಹುದು. ಹೀಗಿದ್ದಾಗ್ಯೂ ದೇವರ ವಾಕ್ಯವು ನಮಗೆ ಭರವಸೆ ನೀಡುವುದೇನೆಂದರೆ ಮಾರ್ಗವನ್ನು ಸರಳವನ್ನಾಗಿಯೂ ಮತ್ತು ಪರಿಸ್ಥಿತಿಯನ್ನು ಸಮಂಜಸವನ್ನಾಗಿಯೂ ಮಾಡಲಾಗುವುದು. ಯಾರು ಪಾಪವನ್ನು ಪ್ರೀತಿಸುತ್ತಾರೊ ಮತ್ತು ಅವರು ನೀತಿವಂತಿಕೆ ಮತ್ತು ಸತ್ಯದ ತಿಳುವಳಿಕೆಗೆ ಬಂದಮೇಲೆಯೂ ಬೇಕೆಂತಲೇ ಪಾಪವನ್ನು ಆರಿಸಿಕೊಳ್ಳುತ್ತಾರೊ ಅವರು ಮಾತ್ರವೇ ಆ ಮಹಾ ಪ್ರವಾದಿಯನ್ನು ಪ್ರತಿರೋಧಿಸುವವರಾಗುತ್ತಾರೆ ಮತ್ತು ಆತನಿಂದ ಎರಡನೆಯ ಮರಣದ ಮೂಲಕ ನಾಶಗೊಳ್ಳುತ್ತಾರೆ – ಅ.ಕೃ. 3:23.

ಮಿಲಿಯಾಂತರ ಯುಗದ ಅಂತ್ಯದ ದೃಷ್ಟಿಕೋನದಲ್ಲಿ ಮಾನವ ಜಾತಿಯೊಡನೆ ದೈವೀಕ ವ್ಯವಹಾರಗಳನ್ನು ನೋಡುವಾಗ, ಈವರೆಗೆ ದೈವಿಕ ಕ್ರಮದಿಂದ ಮಾನವರ

ಬಗ್ಗೆ ಯಾವುದೇ ನಿಷ್ಕರುಣೆಯಿಂದ ಕಾರ್ಯವೆಸಗಿಲ್ಲ. ನಮ್ಮ ಮೇಲೆ ದೇವರ ನಿಯಮದ ಅತ್ಯುಗ್ರವಾದ ದಂಡನೆಯು ಕಾರ್ಯಗತಗೊಂಡು, ಕ್ರಿಸ್ತನ ಮೂಲಕ ದೇವರ ಕರುಣೆಯೊಂದಿಗೆ ಈಡು ಬಲಿ ಮತ್ತು ಪ್ರಾಯಶ್ಚಿತ್ತ ಸಂಧಾನದೊಂದಿಗೆ ಕೂಡಿಕೊಂಡು ನಿಜವಾಗಿಯೂ ಒಂದು ದೊಡ್ಡ ಆಶೀರ್ವಾದವಾಗಿದೆ. ಆದರೆ ಇದು ಒಂದು ದೃಷ್ಟಿಕೋನದಿಂದಲ್ಲದೆ ತೋರಿಬರುವುದಿಲ್ಲ. ಈ ದೃಷ್ಟಿಕೋನದಿಂದ ನಾವು ದುಃಖ, ತೊಂದರೆ ಮತ್ತು ನೋವನ್ನು ನೋಡುವುದು ಮಾತ್ರವಲ್ಲ, ಪ್ರಸ್ತುತಕಾಲದಲ್ಲಿ ಸಾವುನೋವು ಮತ್ತು ಗೋಳಾಟವನ್ನೂ ನೋಡುತ್ತೇವೆ. ಇದು ಅಪರಾಧಕ್ಕೆ ನ್ಯಾಯವಾದ ದಂಡನೆಯಾಗಿದೆ. ನಿಜವಾಗಿಯೂ ಇದು ಅದರ ಸ್ವಾಭಾವಿಕವಾದ ಪ್ರತಿಫಲ. ಆದರೆ ನಾವು ಪಾಪದಿಂದ ಮತ್ತು ಅದರ ಶಾಪದಿಂದ ಮಾನವನ ವಿಮೋಚನೆಯನ್ನೂ ನೋಡುತ್ತೇವೆ. ಇದನ್ನು ವಿಮೋಚಕನು ಕಲ್ವಾರಿಯಲ್ಲಿ ತನ್ನ ಪರಿಶುದ್ಧ ರಕ್ತದ ಬೆಲೆತೆತ್ತು ಕೊಂಡುಕೊಂಡಿದ್ದಾನೆ. ನಂತರದ ಸಮಯದಲ್ಲಿ ಅದೇ ವಿಮೋಚಕನು ಇದನ್ನು ಪೂರೈಸುತ್ತಾನೆ – ದೈವಿಕ ಕಾರ್ಯಕ್ರಮದ ಪ್ರಕಾರ ಸಭೆಯು ಸುವಾರ್ತಾ ಯುಗದಲ್ಲಿ ಆಯ್ಕೆಗೊಳ್ಳುತ್ತದೆ ಮತ್ತು ಅದು ಆತನ ಮದಲಗಿತ್ತಿಯೂ, ಆತನ ರಾಜ್ಯದ ಜೊತೆ ಬಾಧ್ಯಸ್ತವೂ ಆಗಿರುತ್ತದೆ.

ದೇವದೂತರು ತಮ್ಮ ಮೊದಲಿನ ಸ್ಥಿತಿಗತಿಗಳನ್ನು ಕಾಪಾಡಿಕೊಳ್ಳದೆ, ಮರಣ ದಂಡನೆಗೆ ಒಳಪಡದೆ ತಮ್ಮ ಜೀವನ ಶಕ್ತಿಯನ್ನು ಮರಣದಲ್ಲಿ ಕಳಕೊಳ್ಳದೆ, ಯಾವುದೇ ಕಾಯಿಲೆಯನ್ನಾಗಲೀ, ನೋವನ್ನಾಗಲೀ ಅನುಭವಿಸದೆ, ಆದರೆ ಕೇವಲ ತಮ್ಮ ಸ್ವಾತಂತ್ರ್ಯವನ್ನು ಮತ್ತು ಪವಿತ್ರನೊಡನೆ ಇದ್ದ ಸಾಂಗತ್ಯದಿಂದ ಪ್ರತಿಬಂಧಿಸಲ್ಪಟ್ಟ ದೇವದೂತರಿಗಿಂತಲೂ, ಮಾನವನ ಪಾಲು ಅಂದರೆ ಆದಾಮನ ಪಾಪಕ್ಕಾಗಿ ಉಗ್ರವಾದ ಮರಣದಲ್ಲಿ (ಕಳೆದ ಆರು ಸಹಸ್ರ ವರ್ಷಗಳಲ್ಲಿ ಮರಣ ಸ್ಥಿತಿಯಲ್ಲಿನ ಎಲ್ಲಾ ನೋವು, ಸಂಕಟಗಳನ್ನೊಳಗೊಂಡಂತೆ) ಹೆಚ್ಚು ಅನುಕೂಲವಾಗಿದೆ. ಪತನಗೊಂಡ ದೇವದೂತರು ಗಳಂತೆಯೇ ಮಾನವನನ್ನು ಈ ಲೋಕದಲ್ಲಿ ಸ್ವತಂತ್ರವಾಗಿ ಬಿಟ್ಟಿದ್ದರೆ ಹಾಗೂ ಈ ಲೋಕದ ಸ್ವಾತಂತ್ರ್ಯಗಳನ್ನು ಹೊಂದಿಕೊಳ್ಳುವಂತೆ ಬಿಟ್ಟಿದ್ದರೆ, ಈ ಕಾಲಕ್ಕೆ ಯಾವ ರೀತಿಯ ಉಗ್ರ ಪರಿಸ್ಥಿತಿ ಉಂಟಾಗುತ್ತಿತ್ತೆಂದೂ, ಯಾವ ರೀತಿಯ ಅಡೆತಡೆಗಳಿಲ್ಲದೆ ಕೆಡಕು ಹೆಚ್ಚುತ್ತಾ ಹೋಗುತ್ತಿತ್ತು ಹಾಗೆಯೇ ತಪ್ಪು ಮತ್ತು ಮೋಸ ಮಾಡುವಲ್ಲಿ ಯಾವ ರೀತಿಯ ಉತ್ಸುಕತೆ ಉಂಟಾಗಿ ಲೋಕದ ದುಃಖವು ಹೆಚ್ಚುತ್ತಾ ಹೋಗುತ್ತಿತ್ತೆಂದು ನಾವು ಆಲೋಚಿಸಬಹುದು. ಈಗಾಗಲೇ ನಾವು ನೋಡುವಂತೆ ಮಾನವ ಈ ಅಲ್ಪ ಜೀವಿತ ಕಾಲದಲ್ಲಿ ತನ್ನ ಸ್ವಾರ್ಥ ಸಾಧನೆಗೆ ಒಂದು ಅದ್ಭುತವಾದ ಬುದ್ದಿಶಾಲಿಯಾಗಿ ಮಾಡಲು ಸ್ವಉನ್ನತಿಗೆ ಬೇಕಾದ ಎಂಥಾಃ ಪ್ರಳಯಾಂತಕ ಬುದ್ದಿಶಕ್ತಿ ಉಪಯೋಗಿಸಿ, ಮತ್ತು ತನ್ನ ಜೊತೆಗಾರರನ್ನು ಗೋಳಾಡಿಸಲು ಆತನು ಎಷ್ಟರಮಟ್ಟಿಗೆ ಸಾಗಿಹನು ಎಂಬುದನ್ನು ನಾವು ನೋಡಬಹುದು. ನಮ್ಮ ಕಾಲದ ಅನೇಕ ಮಿಲಿಯಾಧಿಪತಿಗಳು ಹಿಂದೆ ಬಡ ಹುಡುಗರಾಗಿದ್ದವರು ಮತ್ತು ಅವರುಗಳು ತಮ್ಮ ನೂರು ಅಥವಾ ಇನ್ನೂರು ಮಿಲಿಯ ಡಾಲರುಗಳನ್ನು ಕೇವಲ ಐವತ್ತು ವರ್ಷಕ್ಕೂ ಕಡಿಮೆ ಅವಧಿಯಲ್ಲಿ ಶೇಖರಿಸಿದ್ದಾರೆ ಎಂಬುದನ್ನು ನಾವು ಪರಿಗಣಿಸುವಾಗ ಅಂಥಹ ಬುದ್ಧಿಶಾಲಿಗಳಿಗೆ ಕಾರ್ಯಸಾಧಿಸಲು ಒಂದು ಶತಮಾನದ ಅವಧಿಯಿದ್ದಿದ್ದರೆ ಅವರಿಂದ ಏನೆಲ್ಲಾ ಅಪೇಕ್ಷಿಸಬಹುದು? ಅದರ ನ್ಯಾಯಯುತವಾದ ಫಲಿತಾಂಶವನ್ನು ನೋಡುವಾಗ ಅದು ಕೆಲವು ಕುತಂತ್ರಿ ಮತ್ತು ಲೋಭಿಗಳ ಲಾಭಕ್ಕಾಗಿ ಮಾನವ ಕುಟುಂಬದ ಅಧಿಕ ಭಾಗದವರ ಮೇಲೆ ನಡೆದ ಗುಲಾಮಗಿರಿ ಮತ್ತು ಅವರನ್ನು ಪಶುಪ್ರಾಯದವರಂತೆ ಕೀಳಾಗಿ ನಡೆಸಿಕೊಂಡುದರ ಫಲವಾಗಿದೆ ಎಂದು ನಿಸ್ಸಂದೇಹವಾಗಿ ತೋರಿಬರುತ್ತದೆ.

ಈ ದೃಷ್ಟಿಯಲ್ಲಿ ನೋಡುವಾಗ ದೇವರು **"ನೀನು ಸತ್ತೇ ಹೋಗುವಿ"** ಎಂದು ಅನುಮತಿಸಿದ ಶಾಪ ಅಥವಾ ದಂಡನೆಯ ರೂಪಕ್ಕಾಗಿ ನಮ್ಮ ಹೃದಯಗಳು ಆತನಿಗೆ ಕೃತಜ್ಞತೆಗಳೊಂದಿಗೆ ಮೇಲಕ್ಕೇರುತ್ತವೆ. ಮತ್ತು ಅದೇ ಸಮಯದಲ್ಲಿ, ಒಂದು ಜನಾಂಗವಾಗಿ ನಮ್ಮ ಅನುಭವವು ನಮಗಾಗಿ ಮಾತ್ರವಲ್ಲ, ಪವಿತ್ರ ದೇವದೂತರುಗಳಿಗೂ, ಬಿದ್ದುಹೋದ ದೇವದೂತರಿಗೂ ಒಂದು ಉದ್ದೇಶಿತ ಪಾಠದಂತಿದೆ ಎಂದು ನಾವು ಹೆಚ್ಚು ಸಂತೋಷ ಪಡಬಹುದಾಗಿದೆ. ಹೇಗಾದರೂ, ಪಾಪದ ಹೆಚ್ಚಳವುಳ್ಳ ಮತ್ತು ನಿವಾರಿಸಲಾಗದ ಅದರ ಫಲಗಳ ಈ ದೊಡ್ಡ ಪಾಠವನ್ನು ಇನ್ನೂ ಇತರ ಲೋಕದಲ್ಲಿ ಸೃಷ್ಟಿಸದೇ ಇರುವ ಬುದ್ಧಿ ಜೀವಿಗಾಗಿ ದೇವರು ಉಪಯೋಗಿಸುತ್ತಾನೆ. ಇನ್ನು ಬಹಳ ದೂರದ ಭವಿಷ್ಯತ್ ಕಾಲದಲ್ಲಿ, ಇನ್ನೂ ಸೃಷ್ಟಿಸದ ಬಿಲಿಯಾಂತರ ಜನರಿಗಾಗಿ ನೀತಿವಂತಿಕೆಯ ಶಿಕ್ಷಕರನ್ನು ಈ ಲೋಕದ ವಿಮೋಚನೆಗೊಂಡ ಮತ್ತು ಪುನಃ ಸ್ಥಾಪನೆಗೊಂಡವರಿಂದ ಸೆಳೆಯಬಹುದೆಂದು ಯಾರು ತಿಳಿದಿರುವರು. ಅವರು ಪಾಪದೊಡನೆ ನಿಜವಾದ ಅನುಭವವನ್ನು ಹೊಂದಿದ್ದಾರೆ ಮತ್ತು ಈ ಅನುಭವಗಳಿಂದ ಅವರು ದೇವರ ಚಿತ್ತಕ್ಕೆ ಸಂಪೂರ್ಣವಾಗಿ ವಿಧೇಯರಾಗದೆ ದಾರಿ ತಪ್ಪುವ ಇತರರನ್ನು ಮಾಗದರ್ಶಿಸಬಹುದು.

ಈ ತತ್ವದ ಉದಾಹರಣೆಯಾಗಿ, ಅಂದರೆ ಅನಾನುಕೂಲತೆಯನ್ನು ತಳ್ಳಿಹಾಕಿ ಅದನ್ನು ಆಶೀರ್ವಾದವಾಗಿ ಉಪಯೋಗಿಸಿದವರ

ಉದಾಹರಣೆಯನ್ನಾಗಿ ನಾವು ಇಸ್ರಾಯೇಲ್ಯರಲ್ಲಿ ಕಾಣುತ್ತೇವೆ. ಒಂದು ಜನಾಂಗವಾಗಿ ಇಸ್ರಾಯೇಲ್ಯರನ್ನು ಇತರ ದೇಶದಿಂದ ಹೊರಬರುವಂತೆ ಕರೆ ನೀಡಲಾಗಿದೆ ಮತ್ತು ಅವರನ್ನು ಒಂದು ಸಾಂಕೇತಿಕ ಜನಾಂಗವಾಗಿ ಉಪಯೋಗಿಸಲಾಗುವುದು. ಅವರ ಒಡಂಬಡಿಕೆಯ ನಿಯಮವು ಸಹಜವಾಗಿ ಅನುಕೂಲಕರವಾಗಿದ್ದು, ನಿಖರವಾಗಿ ಹೇಳುವುದಾದರೆ ಅವರಿಗೆ ಎರಡನೆಯ ಪರೀಕ್ಷೆಯಾಗಿ ರಚಿಸಲ್ಪಟ್ಟಿದೆ. ಇದರಲ್ಲಿ ಸೋತುಹೋದಲ್ಲಿ ಅವರು ಎರಡನೆಯ ಖಂಡನೆಗೆ ಗುರಿಯಾಗುತ್ತಾರೆ. ಸಹಜವಾಗಿ ಅವರನ್ನು ಲೋಕದ ಇತರ ಜನಾಂಗದವರಿಗಿಂತ ಹೆಚ್ಚಾಗಿ ಖಂಡಿಸಿ ಬಿಡಲಾಗುತ್ತದೆ. ದೇವರು ಅಬ್ರಹಾಮನ ಸಂಗಡ ಒಡಂಬಡಿಕೆಯಲ್ಲಿ ಈಗಾಗಲೇ ಅವರಿಗೆ ನಂಬಿಕೆಯಿಂದ ನೀತಿವಂತರಾಗುವಂತೆ ಸೂಚಿಸಿದ್ದಾನೆ. ಯಾಕೆಂದರೆ ಧರ್ಮಶಾಸ್ತ್ರದ ಕಾರ್ಯಗಳಿಂದ (ಕರ್ಮದಿಂದ) ಯಾರೊಬ್ಬರೂ ನೀತಿವಂತರೆಂದು ನಿರ್ಣಯಿಸಲ್ಪಡಲು ಸಾಧ್ಯವಿಲ್ಲ. ಇಸ್ರಾಯೇಲ್ಯರ ಒಡಂಬಡಿಕೆ ಸಮರ್ಪಕವಾದ ಕಾರ್ಯಕ್ಕೆ ಕರೆನೀಡುತ್ತದೆ. ವಂಶಪಾರ್ಯಂಪರ್ಯವಾದ ದೇಹದ ಬಲಹೀನತೆಗಳ ಕಾರಣ ಒಳ್ಳೆ ಕೆಲಸಗಳನ್ನು ಮಾಡಲು ಅಸಾಧ್ಯವಾದುದರಿಂದ ಇಸ್ರಾಯೇಲ್ಯರು ತಮ್ಮ ಸ್ವಂತ ಒಡಂಬಡಿಕೆಯ ಶಾಪಕ್ಕೆ ಅಂದರೆ ಮರಣ ದಂಡನೆಗೆ ಬಿದ್ದುಹೋದರು. ಈ ರೀತಿಯಲ್ಲಿ ಜೀವಕ್ಕೆ ಅಭಿಷೇಕಿಸುವ ಅಂದರೆ ನಿತ್ಯಜೀವದ ಉದ್ದೇಶ ಹೊಂದಿದ್ದ ಆ ಒಡಂಬಡಿಕೆಯು ಮರಣಕ್ಕೆ ಕಾರಣವಾಯಿತು (ರೋಮಾ. 7:9–14). ಆದರೆ ದೇವರು ಇಸ್ರಾಯೇಲ್ಯರನ್ನು ಒಂದು ಸಾಂಕೇತಿಕ ಜನಾಂಗವಾಗಿ ಮತ್ತು ಯಾವುದೇ ಅಸಮರ್ಪಕವಾದ ವ್ಯಕ್ತಿಯು ಸರ್ವಸಂಪೂರ್ಣವಾದ ತನ್ನ ಧರ್ಮಶಾಸ್ತ್ರವನ್ನು ಸಮರ್ಪಕವಾಗಿ ಪಾಲಿಸಲು ಸಾಧ್ಯವಿಲ್ಲವೆಂಬುದಕ್ಕೆ ಉದಾಹರಣೆಯಾಗಿ ಉಪಯೋಗಿಸಿ ಅವರ ಖಂಡನೆಯನ್ನು ಒಳಗೊಂಡಿರುವ ತನ್ನ ಈ ಉಪಯೋಗವನ್ನು ಅವರ ನಿತ್ಯ ನಾಶನಕ್ಕಾಗಿ ಕಾರ್ಯವೆಸಗುವಂತೆ ಅನುಮತಿಸಲಿಲ್ಲ. ಇದರ ಫಲವಾಗಿ, ಉಳಿದ ಮಾನವರನ್ನು ವಿಮೋಚಿಸುವಾಗ, ಆದಾಮನ ಜನಾಂಗದವರೆಲ್ಲರನ್ನೂ ಕ್ರಿಸ್ತನು ತನ್ನ ಸಮರ್ಪಣೆಯ ಮೂಲಕ ವಿಮೋಚಿಸಿದ ಅದೇ ಯೋಜನೆಯು ವಿಶೇಷವಾದ ಒಲವಿಗೆ ಪಾತ್ರವಾಗಿದ್ದ ಆ ಜನಾಂಗಕ್ಕೂ ಅನ್ವಯವಾಯಿತು. ಅದು ಧರ್ಮಶಾಸ್ತ್ರದ ಒಡಂಬಡಿಕೆಯ ಮೂಲಕ ವಿಶೇಷವಾದ ದಂಡನೆಗೆ ಒಳಗಾದ ಜನಾಂಗವಾಗಿತ್ತು (ರೋಮಾ. 2: 11–13, 3:19–23 ಇವುಗಳನ್ನು ನೋಡಿರಿ). ಈ ಉದ್ದೇಶಕ್ಕಾಗಿ, ತಾನು ಆದಾಮನ ಮೂಲಕ ಮೂಲದಲ್ಲಿ ಖಂಡನೆಗೊಳಗಾದ ಲೋಕದ ಇತರರಿಗಾಗಿ ಅರ್ಪಿಸಿದ ಬಲಿಯು ಮೂಲಕವಾಗಿಯೇ ಧರ್ಮಶಾಸ್ತ್ರದ ಮೂಲಕ ಖಂಡನೆಗೊಳಗಾದವರನ್ನು ಸಹಾ ರಕ್ಷಿಸುವುದಕ್ಕಾಗಿ ನಮ್ಮ ಕರ್ತನಾದ ಯೇಸುವು ಧರ್ಮಶಾಸ್ತ್ರದ ಒಡಂಬಡಿಕೆಯ ಅಡಿಯಲ್ಲಿಯೇ ಜನಿಸಲ್ಪಟ್ಟನು – ಗಲಾತ್ಯ 4:4.5.

ದೇವರು ಮತ್ತು ಮನುಷ್ಯರ ನಡುವಣ ಪುನಃಸಂಧಾನದ ಅವಶ್ಯಕತೆಯನ್ನು, ಮನುಷ್ಯರ ಪಾಪ ನಿವೃತಿಯ ಸಲುವಾಗಿ ಅಗತ್ಯವಾಗಿದೆ ಎಂಬುದನ್ನು ದೇವರು ತಾನೇ ಜೀವದ ಮೂಲವಾಗಿದ್ದಾನೆ ಎಂಬ ಸತ್ಯತೆಯನ್ನು ನಾವು ಕಾಣುತ್ತೇವೆ. ಯಾವುದೇ ಜೀವಿಯು ನಿತ್ಯಜೀವವನ್ನು ಅನುಭವಿಸಬೇಕಾದ್ದಲ್ಲಿ ಅದು ಆತನ ಬಹುಮಾನವಾಗಿರಬೇಕು. ಯಾಕೆಂದರೆ **"ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ"** (ರೋಮಾ. 6–23)ವಾಗಿದೆ. ದೇವರ ಆಡಳಿತ ಮತ್ತು ನಿಯಮಗಳ ತತ್ವದ ಪ್ರಕಾರ ದೇವರು ಪಾಪವನ್ನು ಯಾವುದೇ ಮಟ್ಟದಲ್ಲಿ ಕೆಡುಕನ್ನು ಕಟಾಕ್ಷಿಸಲಾರನು (ಹಬಕ್ಕೂಕ 1:13 ನೋಡಿರಿ). ಆತನು ಪಾಪವನ್ನು ಕ್ಷಮಿಸುವವನಲ್ಲ ಅಥವಾ ಯಾವುದೇ ಮಟ್ಟದಲ್ಲಿ ಅದರ ಅಗತ್ಯತೆಯನ್ನು ಅನುಮತಿಸುವವನಲ್ಲ. ಪರಿಪೂರ್ಣವಾದ ಆತನ ಉದ್ದೇಶವೇನೆಂದರೆ ಅಸಮರ್ಪಕನಾದ ಯಾರೇ ಆಗಲಿ ನಿತ್ಯಜೀವದ ಅಸ್ಥಿತ್ವವನ್ನು ಹೊಂದಿಕೊಳ್ಳಬಹುದಾದ ನೀತಿ ನಿರ್ಣಯದ ಹೊರತು ತನ್ನ ಮಕ್ಕಳಾಗಲು ಯೋಗ್ಯರಲ್ಲ ಎಂಬುದೇ. ಮಾನವನು ಪಾಪದಲ್ಲಿ ಬಿದ್ದುಹೋದಾಗಿನಿಂದ ಆತನು ಮರಣದಂಡನೆಗೆ ಪಾತ್ರನಾಗಿದ್ದಾನಲ್ಲದೆ, ಇದರೊಂದಿಗೆ ಆತನು ತನ್ನನ್ನು ಕುಲಷಿತಪಡಿಸಿಕೊಂಡು ಕೆಳದರ್ಜೆಗೆ ಇಳಿಸಿಕೊಂಡಿದ್ದಾನೆ, ನೀತಿಭ್ರಷ್ಟನನ್ನಾಗಿ ಮಾಡಿ ಕೊಂಡಿದ್ದಾನೆ ಮತ್ತು ಹೆಚ್ಚಾಗಿ ತನ್ನ ಮನಸ್ಸಿನಿಂದ ಮತ್ತು ಪ್ರಜ್ಞೆಯಿಂದ ದೈವಸ್ವರೂಪವನ್ನು ತೊಡೆದುಹಾಕಿದ್ದಾನೆ. ಆದುದರಿಂದ ನಿತ್ಯಜೀವದ ಏಕೈಕ ನಿರೀಕ್ಷೆಯು ಯಾವುದೋ ಶಕ್ತಿ ಅಥವಾ ಮಾರ್ಗ ಅಥವಾ ಪಾರುಪತ್ಯದಲ್ಲಿ ಅಡಗಿದೆ ಮತ್ತು ಈ ಮೂಲಕ ಎರಡು ಸಂಗತಿಗಳು ನೆರವೇರುತ್ತವೆ (1) ನ್ಯಾಯವಿಚಾರಣೆಯಲ್ಲಿ ವಿಧಿಸಲ್ಪಡುವ ಮರಣದಂಡನೆಯಿಂದ ಮಾನವರ ಬಿಡುಗಡೆ (2) ಆತನು ಬಿದ್ದುಹೋಗಿರುವ ಪಾಪದ ಅಧೋಗತಿಯ ಸ್ಥಿತಿಯಿಂದ, ಭ್ರಷ್ಟತೆಯಿಂದ ನಿರಪೇಕ್ಷವಾದ ಪವಿತ್ರತೆ ಮತ್ತು ಸಮರ್ಪಕತೆಗೆ ಮಾನವನನ್ನು ಮೇಲಕ್ಕೆ ಎತ್ತುವಿಕೆ. ಈ ಎರಡೂ ಸಂಗತಿಗಳು ಪರಿಣಾಮಕಾರಿ ಯಾದರೆ ಆಗ ನಿರೀಕ್ಷೆಯುಂಟು. ಇವೆರಡೂ ಪರಿಣಾಮಕಾರಿಯಾಗದಿದ್ದರೆ ಮಾನವನಿಗೆ ನಿತ್ಯಜೀವದ ನಿರೀಕ್ಷೆಯು ಕಿಂಚಿತ್ತಾದರೂ ಇರುವುದಿಲ್ಲ. ಪತನಗೊಂಡ

ಮಾನವ ಕುಟುಂಬದಲ್ಲಿ ನಾವು ವ್ಯರ್ಥವಾದ ಸಹಾಯಕ್ಕಾಗಿ ನೋಡುತ್ತೇವೆ. ಕೆಲವರು ಇತರರಿಗಿಂಥ ಕಡಿಮೆಯಾಗಿ ಪತನಗೊಂಡಿರುವರಾದರೂ, ಕಡಿಮೆ ಭ್ರಷ್ಟರಾಗಿರುವವರಾದರೂ ಎಲ್ಲರೂ ಪಾಪ ಮಾಡಿರುವವರೇ ಆಗಿದ್ದಾರೆ, ಎಲ್ಲರೂ ದೇವರ ಮಹಿಮೆಹೊಂದದೆ ಹೋಗಿದ್ದಾರೆ. ಒಬ್ಬನೇ ಒಬ್ಬ ನೀತಿವಂತನು ಇರುವುದಾದರೂ ಆತನು ಆತನ ಸಹೋದರನಿಗಾಗಿ ಈಡು ಬೆಲೆಯನ್ನು ತೆರುತ್ತಾನೆ (ಆದಾಮನಿಗೆ ಮತ್ತು ಆದಾಮನ ಅಪರಾಧದಲ್ಲಿ ದಂಡನೆಗೊಳಗಾದವರಿಗೆಲ್ಲರಿಗೂ) ಈ ರೀತಿಯಲ್ಲಿ ದೇವರ ವ್ಯವಸ್ಥೆಯಲ್ಲಿ ಆತನ ಜನಾಂಗದವರನ್ನು ದಂಡನೆಯಿಂದ ಬಿಡಸಬಲ್ಲ ರಕ್ಷಕನಾಗುತ್ತಾನೆ. ಆದರೆ ಅಂಥವರು ಯಾರೂ ಕಾಣಲಿಲ್ಲ – **"ಆದರೆ ಯಾವನಾದರೂ ತನ್ನ ಸಹೋದರನು ಸಮಾಧಿಯಲ್ಲಿ ಸೇರದೆ ಶಾಶ್ವತವಾಗಿ ಬದುಕಿರುವುದಕ್ಕಾಗಿ ದೇವರಿಗೆ ಈಡನ್ನು ಕೊಟ್ಟು ಅವನ ಪ್ರಾಣವನ್ನು ಬಿಡಿಸಲಾರನು"** (ಕೀರ್ತನೆ 49:7–8). ಯಾಕೆಂದರೆ **"ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ ... ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ"** – ರೋಮಾ. 3:10.23.

ದೇವರು ತನ್ನ ಜ್ಞಾನದ ಮೂಲಕವಾಗಿ ಇವೆಲ್ಲವನ್ನೂ ಪೂರ್ವಭಾವಿಯಾಗಿ ತಿಳಿದಿದ್ದನು ಮತ್ತು ಆತನು ಮಾನವಜಾತಿಯನ್ನು ಸೃಷ್ಟಿಮಾಡುವ ಮೊದಲೇ ಇವುಗಳಿಗಾಗಿ ಮುನ್ನೇರ್ಪಾಡು ಮಾಡಿದ್ದಾನೆ ಮತ್ತು ಮಾನವನು ತನ್ನ ದಂಡನೆಯ ಕೇಡಿನ ಮತ್ತು ನೀತಿಭ್ರಷ್ಟತೆಯ ಸ್ಥಿತಿಯಿಂದ ಹೊರಬರುವಂತೆ ಸೂಕ್ತ ಸಮಯದಲ್ಲಿ ಆತನು ತನ್ನ ಯೋಜನೆಯನ್ನು ವ್ಯಕ್ತಪಡಿಸಿರುತ್ತಾನೆ. ಕನಿಕರಿಸುವ ಕಣ್ಣಿಲ್ಲದಿರುವಾಗ, ರಕ್ಷಿಸುವ ತೋಳಿಲ್ಲದಿರುವಾಗ ದೇವರ ಬಾಹು ನಮಗೆ ರಕ್ಷಣೆಯನ್ನು ತಂದಿದೆ. ದೇವರ ಬಾಹುವು (ಶಕ್ತಿಯು) ಪ್ರಕಟಗೊಂಡಿದೆ, ಮಾನವನನ್ನು ಘೋರವಾದ ಮರಣಗುಂಡಿಯಿಂದ, ಪಾಪವೆಂಬ ಹೊಲಸಾದ ಜೇಡಿಮಣ್ಣಿನಿಂದ ಹೊರಬರಲು ಸಹಾಯವಾಗುವಂತೆ, ಪರಲೋಕದಿಂದ ಕೆಳಗೆ ಅದು ಚಾಚಲ್ಪಟ್ಟಿದೆ. ಅದು ನಮ್ಮ ಕರ್ತನಾದ ಯೇಸು – **"ನನ್ನನ್ನು ನಾಶನದ ಗುಂಡಿಯಿಂದ ಎತ್ತಿದನು. ಕೆಸರಿನೊಳಗಿಂದ ನನ್ನನ್ನು ತೆಗೆದು ಬಂಡೆಯ ಮೇಲೆ ನಿಲ್ಲಿಸಿ ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು"** (ಕೀರ್ತನೆ 40:2; ಯೆಶಾಯ 53:1 ಸಹಾ ನೋಡಿರಿ). ಆತನ ಮೂಲಕ ದೇವರು ಪ್ರಕಟಿಸಿದ ಉದ್ಧೇಶವೇನೆಂದರೆ :–

(1) ಸಮಾಧಿಯ ಶಕ್ತಿಯಿಂದ, ಮರಣ ದಂಡನೆಯಿಂದ, ಶಾಪದಿಂದ, ಈಗ ಪ್ರಪಂಚದ ಮೇಲೆ ನೆಲೆಯಾಗಿರುವ ದೇವರ ಕ್ರೋಧದಿಂದ ಮಾನವ ಜಾತಿಯನ್ನು ಬಿಡಿಸಿಕೊಳ್ಳುವ ಈಡು ಬಲಿಯು ನಮ್ಮ ಕರ್ತನಾದ ಯೇಸುವಿನ ಶಿಲುಬೆಯ ಮರಣದಲ್ಲಿ ಅರ್ಪಿತವಾಗಿದೆ: ದೇವರ ನ್ಯಾಯವು ಸಂಪೂರ್ಣವಾಗಿ ಪೂರೈಸಲ್ಪಟ್ಟಿದೆ ಮತ್ತು ಮಾನವ ಜಾತಿಯ ಪೂರ್ಣ ಪ್ರಪಂಚವು ಕರ್ತನಾದ ಯೇಸುವಿಗೆ ಆತನ ಪರಿಶುದ್ಧ ರಕ್ತದ ಬೆಲೆ ತೆತ್ತು ಆತನು ಕೊಂಡುಕೊಂಡಂತೆ, ಆತನಿಗೆ ವರ್ಗಾಯಿಸಲ್ಪಟ್ಟಂತೆ ಎಣಿಕೆಯಾಗಿದೆ.

(2) ಆತನು ವಿಮೋಚಿಸಲ್ಪಟ್ಟ ಜನಾಂಗದವರಿಂದ ತನ್ನ ಜೊತೆ ಬಾಧ್ಯಸ್ಥರಾಗುವಂತೆ **"ಚಿಕ್ಕ ಹಿಂಡನ್ನು"** ಆಯ್ದುಕೊಳ್ಳುವವನಾಗಿದ್ದಾನೆ. ಆತನಿಗೆ ತಮ್ಮ ಸ್ವಅರ್ಪಣಾ ಶ್ರದ್ಧೆಯ ಕಾರಣ ಅವರು ಆತನ ಶ್ರಮೆಯ ಮತ್ತು ಸಮರ್ಪಣೆಯ ಪಾಲುದಾರರು ಎಂದು ಎಣಿಸಲ್ಪಡುವರು ಮತ್ತು ಅವರಿಗೆ ಆತನ ಪರಲೋಕದ ಮಹಿಮೆಯಲ್ಲಿ ಮತ್ತು ಆತನ ಸಮರ್ಪಣೆಯ ಫಲವಾದ ಪ್ರಪಂಚವನ್ನು ಆಶೀರ್ವದಿಸುವ ಭವಿಷ್ಯತ್ತಿನ ಕಾರ್ಯದಲ್ಲಿ ಒಂದು ಪಾಲು ದೊರೆಯುವುದು.

(3) ಮಹಾ ವಿಮೋಚಕನ ಮತ್ತು ಆತನ ಜೊತೆ ಬಾಧ್ಯಸ್ತರೂ ಆತನ ಮದಲಗಿತ್ತಿಯೂ ಆದ ಸಭೆಯ ಮೂಲಕ ಪುನಃವಶದ ಕಾರ್ಯವು **"ದೇವರು ಪೂರ್ವದಲ್ಲಿದ್ದ ತನ್ನ ಪ್ರವಾದಿಗಳ ಮೂಲಕ ಮುಂತಿಳಿಸಿರುವ ಕಾಲದಲ್ಲಿ ನೆರವೇರುವುದು"** (ಅ.ಕೃ. 3:19–21 ನೋಡಿರಿ). ಆಗ ಇಚ್ಛಾಪೂರ್ವಕರಾದ ಕೆಡುಕರು, ನೂತನ ಒಡಂಬಡಿಕೆಯ ಶರತ್ತುಗಳಿಗನುಸಾರವಾದ ದೇವರ ಕೃಪೆ ಕರುಣೆಗಳನ್ನು ನಿರಾಕರಿಸಿದವರು ಈ ಮಹಾ ಮಧ್ಯಸ್ಥಗಾರನಾದ ಕ್ರಿಸ್ತನಿಂದ ನಾಶಗೊಳ್ಳುತ್ತಾರೆ ಮತ್ತು ಕ್ರಿಸ್ತನೂ ಮತ್ತು ವಿಮೋಚಿತ ಜನಾಂಗದವರಲ್ಲಿ ಉಳಿದವರು, ಸರ್ವಸಂಪೂರ್ಣರಾಗಿ, ಸಮರ್ಪಕರಾಗಿ ಕ್ರಿಸ್ತನ ಸ್ವಾರೂಪ್ಯತೆಗೆ ಮರಳುವರು ಮತ್ತು ಪ್ರಸ್ತುತ ಪಾಪದ ಅಳ್ವಿಕೆಯಲ್ಲಿ ಗಳಿಸಿದ ಆತನ ಹೆಚ್ಚಿನ ಜ್ಞಾನದೊಡನೆ ಮತ್ತು ಆತನ ನೀತಿವಂತಿಕೆಯೊಡನೆ ಮಾತ್ರವಲ್ಲದೆ ಪುನಃವಶದ ಸಮಯದಲ್ಲಿನ ನೀತಿವಂತಿಕೆಯ ಆಡಳಿತದಲ್ಲಿನ ಅನುಭವಗಳನ್ನು ಹೊಂದಿಕೊಳ್ಳುವರು. ಪರಲೋಕದ ತಂದೆಯ ಕಡೆಗೆ ತಿರುಗಿಕೊಳ್ಳುವರು ಹಾಗೂ ಆಗ ಪಾಪ ನಿವೃತ್ತಿಯ ಮಹಾ ಕಾರ್ಯವು ಪೂರೈಸಲ್ಪಡುವುದು. ಈ ಸಂಗತಿಗಳನ್ನು ಸ್ಪಷ್ಟವಾಗಿ ನೋಡುವವರೆಲ್ಲರೂ ಪಾಪ ವಿಮೋಚನೆಯ ಅಗತ್ಯತೆಯನ್ನು ಕೂಡಲೇ ಗ್ರಹಿಸಿಕೊಳ್ಳುವರು. ಮಾನವರನ್ನು ಅವರ ಸೃಷ್ಟಿಕರ್ತನ ನಿರಪೇಕ್ಷವಾದ ಸಾಮರಸ್ಯಕ್ಕೆ ತರದ ಹೊರತು ಯಾವುದೇ ಆಶೀರ್ವಾದಗಳಿರುವುದಿಲ್ಲ ಅಂಥಾಃ ಆತನ ದಂಡನೆಯ ಪಾವತಿಯು ಪಾಪದಿಂದ ವಿಮೋಚನೆಗೊಂಡ ಪಾಪಿಗಳಿಗೆ

ಮೊಟ್ಟಮೊದಲನೆಯದಾಗಿ ಪುನಃ ಸಂಧಾನದ ಅಗತ್ಯವಾಗಿದೆ. ಯಾಕೆಂದರೆ ದೇವರು ಪಾಪಗಳನ್ನು ನೀತಿನಿರ್ಣಯಿಸುವುದರಲ್ಲಿ ನ್ಯಾಯವಂತನಾಗಿದ್ದಾನೆ. ಇಲ್ಲವಾದಲ್ಲಿ ಆತನು ಅವರನ್ನು ನೀತಿನಿರ್ಣಯ ಮಾಡಲು ಎಂದಿಗೂ ಸಾಧ್ಯವಿಲ್ಲ – **"ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ"** – ರೋಮಾಪುರ 3:26.

ಮೇಲೆ ಹೇಳಿದವುಗಳ ದೃಷ್ಟಿಯಲ್ಲಿ ನಮ್ಮ ಕರ್ತನು ಪಾಪಕ್ಕಾಗಿ ಮಾಡಿದ ಸಮರ್ಪಣೆಯ ಮೂಲಕವಾದ ಸಂಖ್ಯೆಯು, ''ಶಾಪ''ವನ್ನು ನ್ಯಾಯಯುತವಾದ ಸಾಮಾನ್ಯವಾಗಿ ಕೊನೆಗೊಳಿಸುವುದು – ನಾವು ನಂಬಿಕೆಯಿಂದ ವಿಮೋಚನೆಗೊಂಡವರ ಪಾಪ ವಿಮುಕ್ತಿಯನ್ನು ಹೊಂದಿಕೊಳ್ಳುವವರ ಮತ್ತು ನಮ್ಮ ಪ್ರೀತಿಯ ವಿಮೋಚಕನು ತೆರೆದಿಟ್ಟಿರುವ ಅವಕಾಶಗಳನ್ನು ಉಪಯೋಗಿಸಿಕೊಂಡು ದೇವರ ಐಕ್ಯತೆಗೆ ಹಿಂತಿರುಗುವವರ ಸಂಖ್ಯೆಯನ್ನು ತೀರ್ಮಾನಿಸುವುದಕ್ಕೆ ಯಾವುದೇ ಒರೆಗಲ್ಲು ಆಗಲಾರದು. ಕ್ರಿಸ್ತನ ಮೂಲಕವಾದ ದೇವರ ಕೃಪೆಯೂ ಮತ್ತು ನಿತ್ಯಜೀವವೂ ದೇವರೊಂದಿಗೆ ಮತ್ತು ನೀತಿವಂತಿಕೆಯೊಂದಿಗೆ ಆತನ ಎಲ್ಲಾ ನಿಯಮಗಳೊಂದಿಗೆ ಪೂರ್ಣ ಸಾಮರಸ್ಯಕ್ಕೆ ಬರುವವರ ಹೊರತಾಗಿ ಬೇರೆ ಎಲ್ಲರೂ ಸಹಾ ಹೊಂದಿಕೊಳ್ಳಬಹುದೆಂಬುದಕ್ಕೆ ದೇವರ ಕಡೆಯಿಂದ ಯಾವುದೇ ಪ್ರಸ್ತಾಪವಿರುವುದಿಲ್ಲ ಅಥವಾ ಮಾನವನ ಕಡೆಯಿಂದ ಯಾವುದೇ ಸಮಂಜಸವಾದ ನೆಲೆ ಇರುವುದಿಲ್ಲ. ದೇವರ ಕೃಪಾ ಜ್ಞಾನವು ಮತ್ತು ಪ್ರಪಂಚವು ಇಂದು ಅನುಭವಿಸುತ್ತಿರುವುದಕ್ಕಿಂತ ಇನ್ನೂ ಹೆಚ್ಚಾದ ಅವಕಾಶಗಳು ದೇವರ 'ಸೂಕ್ತ ಸಮಯ'ದಲ್ಲಿ ದೊರೆಯಲಿರುವುದಕ್ಕಾಗಿ ಮತ್ತು ಅದು ಎಲ್ಲಾ ಜೀವಿಗಳಿಗೂ ವಿಸ್ತರಿಸಲ್ಪಡುತ್ತಿರುವುದಕ್ಕಾಗಿ ನಾವು ಸಂತೋಷಪಡುತ್ತೇವೆ – **"ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು"** – 1 ತಿಮೋಥೆ 2:6.

* * * * * *

*ಶೀಘ್ರದಲ್ಲಿಯೇ ಪುನರ್‌ವಶದ ಮಹಿಮೆಯು*
*ಭೂಮಿಗೆ ದೈವಾನುಗ್ರಹದ ವಿಶ್ರಾಂತಿಯನ್ನು ತರುವದು;*
*ನಿರ್ಗತಿಕರು, ದುರ್ಬಲರೂ ಮತ್ತು ಬಳಲಿ ಹೋದವರೂ*
*ಉದ್ಧರಿಸಲ್ಪಟ್ಟು ಆಶೀರ್ವಾದ ಹೊಂದುವರು.*

*ಇದೋ, ದೇವರ ರಾಜ್ಯವು ಸಮೀಪಿಸುತ್ತಿದೆ;*
*ಆಗ ದಬ್ಬಾಳಿಕೆಯ ಪೀಡನೆಯು ಬೇಗನೆ ಕೊನೆಗೊಳುವದು;*
*ಭೂಮಿಯಲ್ಲಿರುವ ವ್ಯಸನ ಮತ್ತು*
*ದುಃಖಭರಿತ ವಿದಾಯಗಳು*
*ಶೀಘ್ರದಲ್ಲಿಯೇ ಆನಂದಕರ ವರ್ತನೆಯಾಗಿ*
*ಬದಲಾವಣೆ ಹೊಂದುವದು.*

*ಹಾಡಿರಿ ! ಓ ಪಾಡಿರಿ ! ಮಹಿಮೆಯ ಸಂತತಿಯೇ,*
*ಶುಭಸಮಾಚಾರವನ್ನು ಕೂಗುತ್ತಾ ಹೋಗಿರಿ !*
*ಬಿಡುಗಡೆಯ ಕಥನವನ್ನು ಎಲ್ಲೆಲ್ಲೂ*
*ಪ್ರಚುರಪಡಿಸುತ್ತಾ ಹೋಗಿ –*
*ವಾಸಿಪಡಿಸುವ ಅದರ ಗುಣವನ್ನು ಎಲ್ಲರಿಗೂ ತಿಳಿಯಬೇಕು.*

*ಹೇಗೆ ಏದೆನ್ ತೋಟ ಪುನಃ ಅರಳುವುದು*
*ರಮ್ಯತೆ ಪಡೆವದು*
*ಮತ್ತೊಮ್ಮೆ ಪುನರ್‌ಚೇತನಗೊಳುವುದು,*
*ಮನುಷ್ಯರ ಅಗಾಧವಾದ ಸಾಮ್ರಾಜ್ಯವು*
*ದೇವರ ಉದ್ಯಾನವನವಾಗಿ ಮಾರ್ಪಡುವುದು ಎಂದು ಹೇಳಿ.*

*ಹೇಗೆ ಸೈತಾನನ ಕತ್ತಲಿನ ಸಾಮ್ರಾಜ್ಯವು*
*ಒಡನೆಯೇ ಕಿತ್ತೊಗೆಯಲ್ಪಡುವದೆಂದು ಹೇಳಿರಿ*
*ಮತ್ತು ಮರಣಾಂಧಕಾರದ ಬಂದಿಖಾನೆಯಿಂದಾಚೆ,*
*ಭೂಮಿಯಲ್ಲಿದ್ದ ಪ್ರೀತಿಪಾತ್ರರೆಲ್ಲರೂ ಹೊರಬರುವರು.*